ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಗ್ಲಾಸ್ಗೊದಲ್ಲಿ ನಡೆಯುತ್ತಿರುವ ಕಾಮನ್ ವೆಲ್ತ್ ಕ್ರೀಡಾಕೂಟದ ಮಹಿಳೆಯರ 48 ಕೆ.ಜಿ ವಿಭಾಗದ ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತದ ಮೀರಾಬಾಯಿ ಚಾನು ಅವರು ಭಾನುವಾರ ಚಿನ್ನದ ಪದಕ ಪಡೆದುಕೊಂಡಿದ್ದಾರೆ.


27 ಜುಲೈ, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ :136 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಬರವನ್ನು ಎದುರಿಸುವ ಬಲವಾದ ಇಚ್ಛಾಶಕ್ತಿ ಇದೆಯೇ » 2





ಬಿಪಿಎಲ್ ಕಾರ್ಡ್ ಪಡೆಯಲು ವಾರ್ಷಿಕ ಆದಾಯದ ಮಿತಿ » 3





ವಿಜೃಂಭಣೆಯ ಶ್ರೀ ಲಕ್ಷ್ಮೀ ವೆಂಕಟರಮಣ ರಥೋತ್ಸವ » 4


# ಪರೀಕ್ಷಾ ವ್ಯವಸ್ಥೆ ಸುಧಾರಣೆಗೆ ಕಾರ್ಯಪಡೆ

## ಪ್ರಧಾನಿ ನರೇಂದ್ರ ಮೋದಿ ಘೋಷಣೆ | ಕರ್ನಾಟಕದ ನಂದನ್ ನಿಲೇಕಣಿ ನೇತೃತ್ವ

• ಪ್ರಜೋದಯ ವರದಿ

**ನವದೆಹಲಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ಸಿಜೆಪಿ ಹಾಗು ವಿಪಕ್ಷಗಳ ತೀವ್ರ ಪ್ರತಿಭಟನೆಗೆ ಮಣಿದು ಶಿಕ್ಷಣ ಸಚಿವರ ರಾಜೀನಾಮೆ ಪಡೆದಿರುವ ಪ್ರಧಾನಿ ನರೇಂದ್ರ ಮೋದಿ ಅವರು ದೇಶಾದ್ಯಂತ ಪರೀಕ್ಷಾ ವ್ಯವಸ್ಥೆ ಸುಧಾರಣೆಗೆ ಉನ್ನತ ಮಟ್ಟದ ಕಾರ್ಯಪಡೆ ರಚಿಸಿದ್ದಾರೆ.

ಪರೀಕ್ಷಾ ವ್ಯವಸ್ಥೆಯಲ್ಲಿನ ಲೋಪಗಳನ್ನು ಸರಿಪಡಿಸುವ ಮತ್ತು ಸುಧಾರಣೆ ಉದ್ದೇಶದಿಂದ ಕರ್ನಾಟಕದ ಉದ್ಯಮಿ ನಂದನ್ ನಿಲೇಕಣಿ ನೇತೃತ್ವದಲ್ಲಿ ಉನ್ನತ ಮಟ್ಟದ ಕಾರ್ಯಪಡೆ ರಚಿಸಲಾಗಿದೆ ಎಂದು ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸೆಲ್ಫಿ ವಿಡಿಯೊ ಹಂಚಿಕೊಳ್ಳುವ ಮೂಲಕ ಈ ಮಾಹಿತಿ ನೀಡಿರುವ ಅವರು, ಪರೀಕ್ಷೆಗಳನ್ನು ಸುಸ್ಥಿತ ಹಾಗು ಪಾರದರ್ಶಕವಾಗಿಸಲು ತಂತ್ರಜ್ಞಾನದ ಗರಿಷ್ಟ ಬಳಕೆಯ ಕುರಿತು ನಿಲೇಕಣಿ





ನೇತೃತ್ವದ ಕಾರ್ಯಪಡೆಯು ಸಲಹೆಗಳನ್ನು ನೀಡಲಿದೆ. ಅದರ ಆಧಾರದಲ್ಲಿ ಸರ್ಕಾರವು ಕೆಲಸ ಮಾಡಲಿದೆ ಎಂದು ಹೇಳಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಭಾರತ ಸರ್ಕಾರ ನಿರಂತರವಾಗಿ ವಿವಿಧ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ನಾವು ಈಗಾಗಲೇ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿದ್ದೇವೆ. ಕಠಿಣ ಕಾನೂನು ನಿಬಂಧನೆಗಳನ್ನು ಒಳಗೊಂಡಿರುವ ಸಂಸತ್ತಿನಲ್ಲಿ ಹೊಸ ಶಾಸನವನ್ನು ಜಾರಿಗೆ ತರಲು ಮುಂದಾಗಿದ್ದೇವೆ. ಆದಾಗ್ಯೂ ಭವಿಷ್ಯದತ್ತ ನೋಡಬೇಕು. ನಮ್ಮ ಪರೀಕ್ಷಾ ವ್ಯವಸ್ಥೆಯು ವಿಶ್ವಾಸಾರ್ಹವಾಗಿರಬೇಕು. ಸಮಿತಿಯ ವರದಿಯ ಆಧಾರದ ಮೇಲೆ ಮುಂಬರುವ ಪರೀಕ್ಷೆಗಳ ವಿಶ್ವಾಸಾರ್ಹತೆಯನ್ನು ಆದಷ್ಟು ಬೇಗ ಖಚಿತಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೆಂದು ಅವರು ತಿಳಿಸಿದ್ದಾರೆ.

**ಕ್ರಾಂತಿಕಾರಕ ನಿರ್ಧಾರಕ್ಕೆ ಸಜ್ಜು**

ಪರೀಕ್ಷಾ ವ್ಯವಸ್ಥೆಯನ್ನು ಶುದ್ಧೀಕರಿಸಲು ಕೇಂದ್ರ ಸರ್ಕಾರ ಕ್ರಾಂತಿಕಾರಕ ಹೆಜ್ಜೆ ಇಟ್ಟಿದ್ದು, ಸೋಮವಾರ ಲೋಕಸಭೆಯಲ್ಲಿ ಸಾರ್ವಜನಿಕ ಪರೀಕ್ಷೆಗಳು (ಅಕ್ರಮ ಮಾರ್ಗಗಳ ತಡೆ) ತಿದ್ದುಪಡಿ ಮಸೂದೆ 2026 ಅನ್ನು ಮಂಡಿಸಲು ಸಜ್ಜಾಗಿದೆ.

ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲು ಈ ಮಸೂದೆಯು ಅತ್ಯಂತ ಕಠಿಣ ಕಾನೂನು ಚೌಕಟ್ಟನ್ನು ಪ್ರಸ್ತಾಪಿಸಿದೆ. ಪ್ರಶ್ನೆಪತ್ರಿಕೆ ಸೋರಿಕೆ ಅಥವಾ ವ್ಯವಸ್ಥಿತ ಅಕ್ರಮಗಳಲ್ಲಿ ಭಾಗಿಯಾಗುವ ಸಂಘಟಿತ ಜಾಲಗಳು ಹಾಗು ದೋಷಿಗಳಿಗೆ ಕನಿಷ್ಟ 5 ರಿಂದ 10 ವರ್ಷಗಳವರೆಗೆ ಕಠಿಣ ಜೈಲು ಶಿಕ್ಷೆ ಮತ್ತು 10 ಕೋಟಿ ರೂ. ವರೆಗೆ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಕರಣಗಳಿಗೆ


» ನಾಲ್ಕನೇ ಪುಟದಿಂದ


**ರಾಜೀನಾಮೆಗೆ ಮೊದಲೇ ನಿರ್ಧರಿಸಿದ್ದರು**

ವಿದ್ಯಾರ್ಥಿಗಳ ಪ್ರತಿಭಟನೆ ಆರಂಭವಾದ ಮೊದಲ ದಿನವೇ ಧರ್ಮೇಂದ್ರ ಪ್ರಧಾನ್ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಬಯಸಿದ್ದರೆಂದು ಮಧ್ಯಪ್ರದೇಶದ ಬಿಜೆಪಿ ಸಚಿವ ಕೈಲಾಶ್ ವಿಜಯವರ್ಗೀಯ ಅವರು ಹೇಳಿದ್ದಾರೆ.

ವಿದ್ಯಾರ್ಥಿ ರಾಜಕೀಯದ ದಿನಗಳಿಂದಲೂ ಧರ್ಮೇಂದ್ರ ಪ್ರಧಾನ್ ಅವರನ್ನು ಚೆನ್ನಾಗಿ ಬಲ್ಲೆ. ಅವರ ಪ್ರಾಮಾಣಿಕತೆ ಹಾಗು ಬದ್ಧತೆಗಾಗಿ ಅವರು ಯಾವಾಗಲೂ ಪ್ರಶಂಸೆಗೆ ಅರ್ಹರು. ಆಂದೋಲನದ ಮೊದಲ ದಿನವೇ ಅವರು ಪಕ್ಷದ ಮುಖ್ಯಸ್ಥರಿಗೆ, ರಾಜೀನಾಮೆ ನೀಡುವ ಕುರಿತು ಹೇಳಿದ್ದರು. ಆದರೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ನಿರಾಕರಿಸಿದ್ದರು. ಅಂತಿಮವಾಗಿ ರಾಜೀನಾಮೆ

# ಅರಕಲಗೂಡು ಕಾಂಗ್ರೆಸ್‌ನ ಮುಸುಕಿನ ಗುದ್ದಾಟ ಬಹಿರಂಗ

• ಪ್ರಜೋದಯ ವರದಿ



**ಅರಕಲಗೂಡು:** ಕಾಂಗ್ರೆಸ್ ಪಕ್ಷದ ಬಲವರ್ಧನೆ ಹಾಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಭಾಗವಾಗಿ ಭಾನುವಾರ ಏರ್ಪಡಿಸಿದ್ದ ಸಂಘಟನಾ ಸೃಜನ್ ಅಭಿಯಾನ ಸಭೆಯಲ್ಲಿ ಪಕ್ಷದ ಎರಡು ಬಣಗಳ ಕಾರ್ಯಕರ್ತರು ಪ್ರತ್ಯೇಕ ಸಭೆ ನಡೆಸುವ ಮೂಲಕ ಮುಸುಕಿನ ಗುದ್ದಾಟವನ್ನು ಬಯಲಿಗೆ ತಂದರು.

ತಮಿಳುನಾಡಿನ ಸಂಸದೆ, ಎಐಸಿಸಿ ವೀಕ್ಷಕಿ ಆರ್.ಸುಧಾ, ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರ ನೇತೃತ್ವದಲ್ಲಿ ಭಾನುವಾರ ಸಭೆ ನಿಗದಿಯಾಗಿತ್ತು. ಕೆಲ ಕಾರ್ಯಕರ್ತರು ಹಾಗು ಬೆಂಬಲಿಗರು ಪ್ರತ್ಯೇಕವಾಗಿ ಗುಂಪುಗಳಲ್ಲಿ ಚರ್ಚೆಯಲ್ಲಿ ತೊಡಗಿರುವುದನ್ನು ಗಮನಿಸಿದ ನಾಯಕರು ಅಸಮಾಧಾನ ವ್ಯಕ್ತಪಡಿಸಿದರು.

ಗಾಯತ್ರಿ ಶಾಂತೇಗೌಡ ಅವರು ಮಾತನಾಡಿ, ಇಬ್ಬರ ಜಗಳ ಮೂರನೇಯವರಿಗೆ ಲಾಭವಾಗುವ ರೀತಿಯಲ್ಲಿ ಕಾರ್ಯಕರ್ತರು ನಡೆದುಕೊಳ್ಳಬಾರದು. ಕಾಂಗ್ರೆಸ್ ಪಕ್ಷದಲ್ಲಿ ಬಣಗಳಿಲ್ಲ, ಕಾಂಗ್ರೆಸ್ ಪಕ್ಷವೇ ಏಕೈಕ ಬಣ. ಪಕ್ಷದ ಹಿತವೇ ಎಲ್ಲರಿಗೂ ಮುಖ್ಯವಾಗಬೇಕೆಂದು ಖಡಕ್ ಎಚ್ಚರಿಕೆ ನೀಡಿದರು.

ಗಾಯತ್ರಿ ಶಾಂತೇಗೌಡ ಅವರ ಹರಿತ ಮಾತುಗಳಿಂದ ಕಕ್ಕಾಬಿಕ್ಕಿಯಾದ ಸ್ಥಳೀಯ ಮುಖಂಡರಾದ ಶ್ರೀಧರ್ ಗೌಡ ಹಾಗು ಕೃಷ್ಣೇಗೌಡ ಅವರ ಬೆಂಬಲಿಗರು ಮೌನಕ್ಕೆ ಜಾರಿದರು. ಕಳೆದ ವಿಧಾನಸಭಾ ಚುನಾವಣೆಯ ಬಳಿಕ ಇದೇ ಮೊದಲ ಬಾರಿಗೆ ಕಾಂಗ್ರೆಸ್ ವತಿಯಿಂದ ಆಯೋಜಿಸಲಾಗಿದ್ದ ಈ ಸಂಘಟನಾ ಸೃಜನ್ ಅಭಿಯಾನದಲ್ಲಿ ಶ್ರೀಧರ್ ಗೌಡ, ಕೃಷ್ಣೇಗೌಡ ಸೇರಿ ಹಲವು ಮುಖಂಡರು ಹಾಗು ಅವರ ಬೆಂಬಲಿಗರು ಭಾಗಿಯಾಗಿದ್ದರು. ಇದೇ ವೇಳೆ ಸಂಸದೆ ಸುಧಾ ಅವರು ಪ್ರತ್ಯೇಕ ಕೊಠಡಿಯಲ್ಲಿ ಕುಳಿತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಸಂಬಂಧ ಪಕ್ಷದ ಮುಖಂಡರು ಹಾಗು ಕಾರ್ಯಕರ್ತರಿಂದ ಅಭಿಪ್ರಾಯ ಸಂಗ್ರಹಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಹಿನ್ನಲೆಯಲ್ಲಿ ನಡೆದ ಈ ಸಭೆಯಲ್ಲಿ ಪಕ್ಷದೊಳಗಿನ ವಿವಿಧ ಅಭಿಪ್ರಾಯ, ಮುಖಂಡರ ಬೆಂಬಲಿಗರ ಚಟುವಟಿಕೆ ಗಳು ಹಾಗು ಸಂಘಟನಾ ವಿಚಾರಗಳು ಚರ್ಚೆಗೆ ಬಂದವು.

# ಚನ್ನಮ್ಮನವರ 11ನೇ ದಿನದ ಕಾರ್ಯ: ಸಿದ್ಧತೆ ಪರಿಶೀಲನೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಯಿ ಶ್ರೀಮತಿ ಚನ್ನಮ್ಮನವರ 11ನೇ ದಿನದ ಕಾರ್ಯ ಜು.30ರಂದು ನೆರವೇರಲಿದ್ದು, 1 ರಿಂದ 2.50 ಲಕ್ಷ ಅಭಿಮಾನಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನ ಸಮಾಧಿ ಸ್ಥಳದಲ್ಲಿ ಭಾನುವಾರ ಸಿದ್ದತಾ ಕಾರ್ಯ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮ್ಮನವರ ಮೇಲಿನ ಅಭಿಮಾನದಿಂದ ಆತ್ಮಕ್ಕೆ ಶಾಂತಿ ಕೋರಲು ಲಕ್ಷಾಂತರ ಜನರು ಬರುತ್ತಾರೆ. ಕಾರ್ಯಕ್ರಮಕ್ಕೆ ಬರುವವರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಯಾವ ಸಮಸ್ಯೆ ಆಗದ ರೀತಿಯಲ್ಲಿ ಸಿದ್ಧತೆ ನಡೆದಿದೆ ಎಂದರು.

ಚನ್ನಮ್ಮ ನವರ ನಿಧನದಿಂದ ದೇವೇಗೌಡರು ಪ್ರತಿನಿತ್ಯ ಚಿಂತೆಯಲ್ಲಿದ್ದಾರೆ. ಭಾವನಾತ್ಮಕ ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಅವರ ಆರೋಗ್ಯದ ಮೇಲೆ ಪರಿಣಾಮ ಬೀರಬಾರದೆಂಬ ಚಿಂತೆ ನಮಗಿದೆ. ಎಲ್ಲಾ ರೀತಿಯಲ್ಲೂ ಅವರಿಗೆ ಸ್ಥೈರ್ಯ ತುಂಬುವ ಕೆಲಸವನ್ನು ಕುಟುಂಬದವರು ಮಾಡುತ್ತಿದ್ದೇವೆಂದು ಹೇಳಿದರು.

72 ವರ್ಷದ ಸುದೀರ್ಘ ಜೀವನ ನಡೆಸಿದ ಸಂಗಾತಿಯನ್ನು ದೇವೇಗೌಡರು ಕಳೆದುಕೊಂಡಿದ್ದಾರೆ. ಆ ನೋವಿನಿಂದ ಹೊರಗೆ ಬರಲು ಸಮಯ ಬೇಕಾಗುತ್ತದೆ. ಆ ನೋವನ್ನು ಕಡಿಮೆ ಮಾಡಲು ಅಭಿಮಾನಿಗಳು ಬರುತ್ತಿದ್ದಾರೆ. ಅವರನ್ನು ನೋಡಿಕೊಳ್ಳಲು ನಾವು ಎಚ್ಚರಿಕೆ ವಹಿಸಿದ್ದೇವೆಂದರು.ಮಾಜಿ ಸಚಿವ ಹೆಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಇತರರಿದ್ದರು.



**ಸಿದ್ಧತೆ ಪರಿಶೀಲಿಸಿದ ಸಹೋದರರು**

ತಾಯಿ ಚನ್ನಮ್ಮನವರ ಸಮಾಧಿ ಸ್ಥಳಕ್ಕೆ ಸಹೋದರರಾದ ಹೆಚ್.ಡಿ.ಕುಮಾರಸ್ವಾಮಿ ಹಾಗು ಹೆಚ್.ಡಿ.ರೇವಣ್ಣ ಅವರು ಕೈ ಕೈ ಹಿಡಿದು ಒಟ್ಟಿಗೆ ನಡೆದು ಬಂದರು. 11ನೇ ದಿನದ ಕಾರ್ಯದ ಕುರಿತು ಚರ್ಚಿಸಿದ ಅವರು ಆಗಬೇಕಿರುವ ಕೆಲಸಗಳ ಕುರಿತು ಸಂಬಂಧಪಟ್ಟವರಿಗೆ ಮಾಹಿತಿ ನೀಡಿದರು. ಶಾಮಿಯಾನ, ಕುಡಿಯುವ ನೀರು, ಅಡುಗೆ ತಯಾರಿ, ಆಸನ, ಪಾರ್ಕಿಂಗ್ ವ್ಯವಸ್ಥೆ ಬಗ್ಗೆ ಸಮಾಲೋಚನೆ ನಡೆಸಿದರು.

ಮೈಸೂರು ಸಂಸದ ಯದುವೀರ ಕೃಷದತ್ತ ಚಾಮರಾಜ ಒಡೆಯರ್ ಅವರು ಸಂಜೆ 5 ಗಂಟೆಗೆ ಸಮಾಧಿ ಸ್ಥಳಕ್ಕೆ ಆಗಮಿಸಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಸಾಂತ್ವನ ಹೇಳಿದರು.



# ಹಾಸನದ ರಸ್ತೆಗಳಿಗೆ ಅಗೆತದ ತಲೆನೋವು

-ಮಲ್ಲಿಕಾರ್ಜುನ ಕೊಚ್ಚರಗಿ

## ಡಾಂಬರು ಕಂಡ ರಸ್ತೆಗಳೆಲ್ಲಾ ಪುನ: ಗುಂಡಿಮಯ | ವಾಹನ ಸವಾರರು ಹೈರಾಣ

• ಪ್ರಜೋದಯ ವರದಿ

**ಹಾಸನ:** ನಗರದ ಎಲ್ಲೆಂದರಲ್ಲಿ ಕಾಮಗಾರಿ ನೆಪದಲ್ಲಿ ರಸ್ತೆ ಅಗೆಯಲಾಗುತ್ತಿದ್ದು, ತಿಂಗಳ ಹಿಂದಷ್ಟೇ ಡಾಂಬರು ಕಂಡ ರಸ್ತೆಗಳು ಸಹ ಮತ್ತೆ ಗುಂಡಿಮಯವಾಗಿರುವುದಕ್ಕೆ ವಾಹನ ಸವಾರರು, ನಾಗರಿಕರು ಅಕ್ಷರಶ: ಬೇಸತ್ತು ಹೋಗಿದ್ದಾರೆ.

ರಸ್ತೆ ಸುಧಾರಣೆ ಕಾಮಗಾರಿ ಪೂರ್ಣಗೊಂಡಿತು ಎನ್ನುವಷ್ಟರಲ್ಲಿ ಮತ್ತೊಂದು ಕಾಮಗಾರಿಗೆ ಅದೇ ರಸ್ತೆ ಅಗೆದು ಅವ್ಯವಸ್ಥೆ ಮಾಡುವುದು ಹೆಚ್ಚುತ್ತಿದೆ. ನಗರದ ಪ್ರಮುಖ ರಸ್ತೆಗಳಲ್ಲೂ ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಕೆ, ಒಳಚರಂಡಿ ಕಾಮಗಾರಿ, ವಿದ್ಯುತ್ ಕೇಬಲ್ ಸಂಪರ್ಕ ಸೇರಿ ವಿವಿಧ ಕಾಮಗಾರಿಗಳ ಹೆಸರಿನಲ್ಲಿ ರಸ್ತೆಗಳನ್ನು ಅಗೆದು ಹಾಗೇ ಬಿಡಲಾಗುತ್ತಿದೆ. ಹಲವೆಡೆ ಹೊಸದಾಗಿ ನಿರ್ಮಿಸಿದ ರಸ್ತೆಗಳನ್ನೇ ಮತ್ತೆ ಅಗೆದು ಹಾಕುತ್ತಿರುವುದು ಮಹಾನಗರ ಪಾಲಿಕೆಯ ಸಮನ್ವಯದ ಕೊರತೆಗೆ ಸ್ಪಷ್ಟ ಸಾಕ್ಷಿ. ಒಂದು ಇಲಾಖೆ ರಸ್ತೆ ನಿರ್ಮಿಸಿದರೆ, ಮತ್ತೊಂದು ಇಲಾಖೆ ಅದನ್ನು ಅಗೆದು ಹಾಕುತ್ತಿದೆ. ರಸ್ತೆ ನಿರ್ಮಾಣಕ್ಕೂ ಮೊದಲು ಎಲ್ಲಾ ಇಲಾಖೆಗಳ ಕಾಮಗಾರಿಗಳನ್ನು ಏಕಕಾಲದಲ್ಲಿ ಯೋಜಿಸುವ ವ್ಯವಸ್ಥೆ



ಇಲ್ಲದಿರುವುದರಿಂದ ಸಾರ್ವಜನಿಕರ ತೆರಿಗೆ ಹಣ ಮಣ್ಣುಪಾಲಾಗುತ್ತಿದೆ.

**ಅವ್ಯವಸ್ಥೆಗೆ ಯಾರು ಹೊಣೆ ?**

ಅಗೆದ ರಸ್ತೆಗಳನ್ನು ವೈಜ್ಞಾನಿಕವಾಗಿ ಮುಚ್ಚದಿರುವ ಪರಿಣಾಮ ಮಳೆ ಬಂದರೆ ರಸ್ತೆ ಗುಂಡಿಗಳಲ್ಲಿ ನೀರು ನಿಲ್ಲುತ್ತಿದೆ. ಬಿಸಿಲು ಬಂದರೆ ಧೂಳಿನ ಕಾಟ. ಅಪಘಾತದ ಭೀತಿ, ವಾಹನಗಳ ಹಾನಿ, ವ್ಯಾಪಾರ ನಷ್ಟ ಹಾಗು ಪಾದಚಾರಿಗಳ ಸಂಕಷ್ಟ ನಗರದ ನಿತ್ಯದ ಸಮಸ್ಯೆಗಳಾಗಿ ಪರಿಣಮಿಸಿದೆ. ಹೀಗಾಗಿ, ಮೂಲಸೌಕರ್ಯಕ್ಕೆ ತೆರಿಗೆ ಪಾವತಿಸಿದರೂ ಪ್ರಯೋಜನ ಇಲ್ಲದಂತಾಗಿದೆ.

ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸಮರ್ಪಕವಾಗಿ ನಿರ್ವಹಣೆ ಮಾಡುವ ಬದ್ಧತೆ ತೋರುವುದೇ ಆಡಳಿತ. ಆದರೆ, ಇಲ್ಲಿ ಮಾತ್ರ ಎಲ್ಲವೂ ತದ್ವಿರುದ್ಧ. ಈ ಅವ್ಯವಸ್ಥೆಗೆ ಹೊಣೆ ಯಾರು. ರಸ್ತೆ ನಿರ್ಮಾಣಕ್ಕೆ ಅನುಮೋದನೆ ನೀಡುವ ಮುನ್ನ ಸಂಬಂಧಿಸಿದ ಎಲ್ಲಾ ಇಲಾಖೆಗಳ ಕಾಮಗಾರಿಗಳನ್ನು ಸಮನ್ವಯ ಗೊಳಿಸುವ ಹೊಣೆ ಮಹಾನಗರ ಪಾಲಿಕೆಯದ್ದಲ್ಲವೇ. ಹೊಸದಾಗಿ ನಿರ್ಮಿಸಿದ ರಸ್ತೆಗಳನ್ನೇ ಮತ್ತೆ ಅಗೆಯುವುದರಿಂದ ರಕ್ಷಿಸುವ ಜವಾಬ್ದಾರಿ ಯಾರದ್ದು. ಸಾರ್ವಜನಿಕರ ತೆರಿಗೆ ಹಣ ಈ ರೀತಿ ವ್ಯರ್ಥವಾಗುತ್ತಿದ್ದರೂ ಉತ್ತರಿಸುವವರು ಯಾರೂ ಇಲ್ಲವೆಂದು 19ನೇ ವಾರ್ಡ್‌ನ ನಿವಾಸಿ, ನಿವೃತ್ತ ಶಿಕ್ಷಕಿ ಸರೋಜಮ್ಮ ಅವರು ಅಸಮಾಧಾನ ವ್ಯಕ್ತಪಡಿಸಿದರು.

**ಮಾಡಬೇಕಾದ ಕೆಲಸ ಸಾಕಷ್ಟಿದೆ**

> **ಪೂರ್ವ ನಿರ್ಧರಿತ ಯೋಜನೆಯಂತೆ ರಸ್ತೆಗೆ ಡಾಂಬರು ಹಾಕಲಾಗುತ್ತದೆ. ಆದರೆ, ಮನೆ ಮಾಲೀಕರು ಚರಂಡಿ, ಕುಡಿಯುವ ನೀರಿನ ಪೈಪ್ ಸಮಸ್ಯೆಯಾಗಿದೆ ಎಂದು ಹೇಳುತ್ತಾರೆ. ಅದನ್ನು ನಾವು ಪರಿಗಣಿಸಲೇಬೇಕಾಗುತ್ತದೆ. ಮುಂದೆ ಹೀಗಾಗದಂತೆ ಎಚ್ಚರ ವಹಿಸಲಾಗುವುದು.**
>
> **-ಸತ್ಯನಾರಾಯಣ, ಪಾಲಿಕೆ ಇಂಜಿನೀಯರ್**

19ನೇ ವಾರ್ಡ್‌ನ ಹೇಮಾವತಿ ಆಸ್ಪತ್ರೆ ಸಮೀಪ ಅಂದಾಜು 300 ಮೀಟರ್ ರಸ್ತೆಗೆ ತಿಂಗಳ ಹಿಂದಷ್ಟೇ ಡಾಂಬರು ಹಾಕಲಾಗಿದೆ. ಆದರೆ ವಾರದ ಹಿಂದೆ ಎರಡು ಕಡೆ ಒಳಚರಂಡಿ ಮ್ಯಾನ್‌ಹೋಲ್ ಗುಂಡಿ ತೋಡಲಾಗಿದೆ. ಅದರಿಂದ ರಸ್ತೆ ಸಂಪೂರ್ಣ ಗುಂಡಿಮಯವಾಗಿ ಜಿಟಿಜಿಟಿ ಮಳೆಗೆ ಹದಗೆಟ್ಟಿದೆ. ಸ್ವಲ್ಪ ಎಚ್ಚರ ತಪ್ಪಿದರೂ ವಾಹನ ಸವಾರರು ಅಪಘಾತಕ್ಕೀಡಾಗುವ ಸಾಧ್ಯತೆ ಹೆಚ್ಚಿದೆ. ಚರಂಡಿ, ಕುಡಿಯುವ ನೀರಿನ ಪೈಪ್ ಸಮಸ್ಯೆ ಇದ್ದರೆ ಅಧಿಕಾರಿಗಳು ಅಥವಾ ಮನೆ ಮಾಲೀಕರು ಮೊದಲೇ ಮಹಾನಗರ ಪಾಲಿಕೆ ಗಮನಕ್ಕೆ ತರಬಹುದಿತ್ತು. ಅಥವಾ ಅಧಿಕಾರಿಗಳೇ ಆ ಕುರಿತು ಗಮನಿಸಿ ಮೊದಲು ಸಮಸ್ಯೆ ಬಗೆಹರಿಸಿ ಬಳಿಕ ಡಾಂಬರು ಹಾಕಬೇಕಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಮತ್ತೊಂದೆಡೆ ಕೆ.ಆರ್.ಪುರಂನ ಪಂಚಮುಖಿ ಗಣಪತಿ ದೇವಸ್ಥಾನ ಮುಂಭಾಗದ ರಸ್ತೆಯನ್ನು ಸಂಪೂರ್ಣ ಅಗೆಯಲಾಗಿದೆ. ರಸ್ತೆಯ ಆರಂಭದಿಂದ ಅಂತ್ಯದ ವರೆಗೆ ಸುಮಾರು 500 ಮೀಟರ್ ಅಗೆದಿರುವ ಹಿನ್ನಲೆ ಆ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿಲ್ಲ. ಬಹಳ ವರ್ಷಗಳ ಬಳಿಕ ಡಾಂಬರು ಹಾಕಿರುವ ರಸ್ತೆ ಅಗೆಯಲಾಗಿದೆ. ಮತ್ತೆ ಆ ರಸ್ತೆ ಡಾಂಬರು ಕಾಣುವುದು ಯಾವಾಗ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ.

ಅಧಿಕಾರಿಗಳು ಹೀಗೆ ಬೇಕಾಬಿಟ್ಟಿ ಕೆಲಸ ಮಾಡುವುದು ಬಿಟ್ಟು ಬೇರೆ ಕೆಲಸಗಳತ್ತ ಗಮನ ಹರಿಸಬೇಕು. ವಿದ್ಯಾನಗರದ ಮುಖ್ಯ ರಸ್ತೆಯ ಸಿಮೆಂಟ್ ರಸ್ತೆಯಲ್ಲಿ ಆಳೆತ್ತರ ಗುಂಡಿ ಬಿದ್ದಿದ್ದರೂ ಅದನ್ನು ಮುಚ್ಚುವ ಕಾರ್ಯ ಕೈಗೊಂಡಿಲ್ಲ. ಅಧಿಕಾರಿಗಳು ಪರಿಹರಿಸಬೇಕಾದ ಸಮಸ್ಯೆಗಳತ್ತ ಆದ್ಯತೆ ನೀಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ನಾಲೆಗಳಿಗೆ ನೀರು ಹರಿಸಲು ಎಟಿಆರ್ ಆಗ್ರಹ

• ಪ್ರಜೋದಯ ವರದಿ

**ಅರಕಲಗೂಡು :** ಹಾರಂಗಿ, ಹೇಮಾವತಿ, ಕಟ್ಟೇಪುರ ಮತ್ತು ಚುಂಚನಕಟ್ಟೆ ಅಣೆಕಟ್ಟುಗಳಿಂದ ನಾಲೆಗಳಿಗೆ ನೀರು ಹರಿಸಿ ಕೆರೆಕಟ್ಟೆಗಳನ್ನು ತುಂಬಿಸಿದಲ್ಲಿ ಜನಜಾನುವಾರುಗಳಿಗೆ ಅನುಕೂಲ ಮಾಡಿಕೊಡಿ ಎಂದು ಮಾಜಿ ಶಾಸಕ ಮತ್ತು ಪರಿಸರಕ್ಕಾಗಿ ನಾವು ಸಂಘಟನೆಯ ರಾಜ್ಯಾಧ್ಯಕ್ಷ ಎ.ಟಿ. ರಾಮಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು.

ತಾಲ್ಲೂಕಿನ ರಾಮನಾಥಪುರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಳೆದ ಒಂದು ಶತಮಾನದಿಂದಲೂ ಕಂಡಿರದ ಅತ್ಯಂತ ಕಡಿಮೆ ಮಳೆಯ ಪ್ರಮಾಣ ದಾಖಲಾಗಿದೆ. ಜಾಗತಿಕ ತಾಪಮಾನ ಏರಿಕೆಯು ಉತ್ತುಂಗದಲ್ಲಿದ್ದು, ಪರಿಸರದ ಅಸಮತೋಲನದಿಂದ ಮಳೆಯು ಎಲ್ಲೆಂದರಲ್ಲಿ ಚದುರಿದ್ದು ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡನ್ನೂ ಸಹ ಏಕಕಾಲದಲ್ಲಿ ಅನುಭವಿಸುವ ಪರಿಸ್ಥಿತಿ ಎದುರಾಗಿದೆ.

ಅದೃಷ್ಟವಶಾತ್ ಕೊಡಗಿನ ಹಾರಂಗಿ ಜಲಾಶಯವು ತುಂಬಿದ್ದು ಶನಿವಾರದಿಂದ 4 ಸಾವಿರಕ್ಕೂ ಹೆಚ್ಚು



ಕ್ಯೂಸೆಕ್ಸ್ ನೀರನ್ನು ಕಾವೇರಿ ನದಿಗೆ ಹರಿಬಿಡಲಾಗುತ್ತಿದೆ. ನಾಲೆಗಳಲ್ಲಿ ನೀರು ಹರಿಸಿದಲ್ಲಿ ಹಾಸನ, ಮೈಸೂರು, ಕೊಡಗು, ತುಮಕೂರು ಜಿಲ್ಲೆಗಳ ಜನರಿಗೆ ಅನಕೂಲವಾಗಲಿದ್ದು, ನಾಲೆಗಳಿಗೆ ನೀರು ಹರಿಸಿ ಕುಡಿಯುವ ನೀರು ಮತ್ತು ಜನ ಜಾನುವಾರುಗಳಿಗೆ ಅನುಕೂಲ ಮಾಡಿಕೊಡದಿದ್ದಲ್ಲಿ ರೈತರು ಅನಿವಾರ್ಯವಾಗಿ ರೈತರು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಒತ್ತಾಯಿಸಿದರು.

# ಪಶುವೈದ್ಯಾಧಿಕಾರಿಗಳ ನೇಮಕಾತಿ ಅಂತಿಮ ಆಯ್ಕೆ ಪಟ್ಟಿಗೆ ತಡೆ

• ಪ್ರಜೋದಯ ವರದಿ

**ಬೆಂಗಳೂರು:** ಪಶು ವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿ ಹೊರಡಿಸಿದ್ದ ಅಂತಿಮ ಆಯ್ಕೆ ಪಟ್ಟಿಗೆ ತಾತ್ಕಾಲಿಕ ತಡೆ ನೀಡಲಾಗಿದೆ.

ನೇಮಕಾತಿಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂದು ಜು. 24 ರಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನ ಹಿನ್ನಲೆಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ ಈ ಕ್ರಮ ಕೈಗೊಂಡಿದೆ. ಸಾರ್ವಜನಿಕರ ವಿಶ್ವಾಸವನ್ನು ಕಾಪಾಡುವ ಉದ್ದೇಶದಿಂದ ಹಾಗು ಆರೋಪಗಳ ಗಂಭೀರತೆಯನ್ನು ಮನಗಂಡು ಮಹತ್ವದ ನಿರ್ಧಾರ ಕೈಗೊಂಡಿದೆ ಎಂದು ಆಯೋಗದ ಕಾರ್ಯದರ್ಶಿ ಕೆ. ಜ್ಯೋತಿ ಅವರು ತಿಳಿಸಿದ್ದಾರೆ.

ಪರೀಕ್ಷಾ ಪ್ರಕ್ರಿಯೆಯ ಪ್ರತಿ ಹಂತ ಹಾಗು ಸಂಬಂಧಿತ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ವಾರದೊಳಗೆ ಆಯೋಗಕ್ಕೆ ಸಲ್ಲಿಸುವಂತೆ ಉಪ ಸಮಿತಿಗೆ ನಿರ್ದೇಶನ ನೀಡಲಾಗಿದೆ.

ತನಿಖಾ ಕಾರ್ಯಕ್ಕೆ ಅಗತ್ಯವಾದ ಆಡಳಿತಾತ್ಮಕ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಲು ಕೆಪಿಎಸ್‌ಸಿ ಕಾರ್ಯದರ್ಶಿಯನ್ನು ಹಾಗು ಅಗತ್ಯ ಕಾನೂನು ಸಲಹೆ ನೀಡಲು ಕಾನೂನು ವಿಭಾಗದ ಮುಖ್ಯಸ್ಥರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಉಪಸಮಿತಿ ತನ್ನ ಅಂತಿಮ ವರದಿಯನ್ನು ಸಲ್ಲಿಸುವವರೆಗೆ ಜು. 17ರಂದು ಪ್ರಕಟಿಸಲಾಗಿದ್ದ ಪಶು ವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯ ಜಾರಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಆಯೋಗವು ನಿರ್ಧರಿಸಿದೆ ಎಂದು ಹೇಳಿದ್ದಾರೆ.

# ನೀಟ್ ಅಕ್ರಮ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

• ಪ್ರಜೋದಯ ವರದಿ

**ಅರಸೀಕೆರೆ :** ನೀಟ್ ಪರೀಕ್ಷೆ ಸೋರಿಕೆಯಿಂದ ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಆಗ್ರಹಿಸಿ ನಗರ ಹೊರವಲಯದ ಕಸ್ತೂರಿಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಆವರಣದಲ್ಲಿ ಕಾಂಗ್ರೆಸ್ ವತಿಯಿಂದ ಮೇಣದ ಬತ್ತಿ ಮೆರವಣಿಗೆ ನಡೆಸಲಾಯಿತು.

ಗಾಂಧಿ ಪ್ರತಿಮೆ ಎದುರು ಅಗಲಿದ ವಿದ್ಯಾರ್ಥಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿರುವುದು ಮಹತ್ವದ ಬೆಳವಣಿಗೆಯಾದರೂ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸುವ ಹೋರಾಟ ಇನ್ನೂ ಪೂರ್ಣಗೊಂಡಿಲ್ಲ. ವಿದ್ಯಾರ್ಥಿಗಳ ಮೇಲೆ ದಾಖಲಿಸಿರುವ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು. ಪ್ರಾಣ ಕಳೆದುಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ಹೇಳಿದರು. ಮೇಣದಬತ್ತಿ ಪ್ರತಿಭಟನಾ ಮೆರವಣಿಗೆಯಲ್ಲಿ ತಮಿಳುನಾಡಿನ ಮೈಲಾಡುತುರೈ ಲೋಕಸಭಾ ಕ್ಷೇತ್ರದ ಸಂಸದೆ ಹಾಗು ಎಐಸಿಸಿ ವೀಕ್ಷಕಿ ಆರ್.ಸುಧಾ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಈ.ಹೆಚ್. ಲಕ್ಷ್ಮಣ್, ಕೆಪಿಸಿಸಿ ಕಾರ್ಯಾಧ್ಯಕ್ಷ ಶಶಿಧರ್ ಸೇರಿ ಇತರರಿದ್ದರು.



# ಸೈನಿಕರ ಬಗ್ಗೆ ಗೌರವ ಭಾವನೆ ಬೆಳೆಸಿಕೊಳ್ಳಿ: ಶ್ರೇಯಸ್

• ಪ್ರಜೋದಯ ವರದಿ

**ಹಾಸನ:** ದೇಶದ ಏಕತೆ, ಅಖಂಡತೆ ಹಾಗು ಸಾರ್ವಭೌಮತ್ವದ ರಕ್ಷಣೆಗಾಗಿ ತಮ್ಮ ಪ್ರಾಣ ಪಣಕ್ಕಿಟ್ಟು ಹೋರಾಡುವ ಸೈನಿಕರ ಕುರಿತು ಎಲ್ಲರೂ ಗೌರವ ಭಾವನೆ ಬೆಳೆಸಿಕೊಳ್ಳಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಇಲ್ಲಿನ ಕುವೆಂಪು ನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಉದ್ಯಾನದಲ್ಲಿ ಭಾನುವಾರ ಜಿಲ್ಲಾ ರಾಷ್ಟ್ರೀಯ ಮಾಜಿ ಸೈನಿಕರ ಸಮನ್ವಯ ಸಮಿತಿಯಿಂದ ನಡೆದ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಕಾರ್ಗಿಲ್ ಯುದ್ಧ ಭಾರತೀಯ ಇತಿಹಾಸದಲ್ಲಿ ಎಂದೆಂದಿಗೂ ನೆನಪಿಡುವ ದಿನವಾಗಿದೆ. ನಮ್ಮ ಯೋಧರ ಧೈರ್ಯ, ದೇಶಪ್ರೇಮ ಹಾಗು ಪ್ರಾಮಾಣಿಕತೆಗೆ ಸ್ಪಷ್ಟ ಉದಾಹರಣೆ



ಯಾಗಿದೆ. ಕಾರ್ಗಿಲ್ ವಿಜಯವು ಭಾರತೀಯ ಸಶಸ್ತ್ರ ಪಡೆಗಳ ಅಪ್ರತಿಮ ಸಾಹಸ ರಾಷ್ಟ್ರ ಭಕ್ತಿಯ ಅಮರ ಸಂಕೇತ. ವೀರ ಯೋಧರ ಪರಾಕ್ರಮದಿಂದಲೇ ಇಂದು ಭಾರತವು ಹೆಮ್ಮೆಯಿಂದ ತಲೆ ಎತ್ತಿ ನಿಂತಿದೆ. ಅವರ ತ್ಯಾಗ, ಸೇವೆ ಮತ್ತು ದೇಶಪ್ರೇಮವು ಪ್ರತಿಯೊಬ್ಬ ಭಾರತೀಯನಿಗೂ ಸ್ಫೂರ್ತಿ ಎಂದರು.

ಕ್ಯಾಪ್ಟನ್ ಬೆಟ್ಟೇಗೌಡ ಅವರು ಮಾತನಾಡಿ, 1999ರ ಕಾರ್ಗಿಲ್ ಯುದ್ಧ ಇತಿಹಾಸದ ಪುಟಗಳಲ್ಲಿ ಬರೆದಿಡುವಂತಾಗಿದೆ. ಭಾರತವು 527 ಸೈನಿಕರನ್ನು ಕಳೆದುಕೊಂಡು ನಿರಂತರ ಪ್ರಯತ್ನದ ಬಳಿಕ ಯುದ್ಧ ಗೆದ್ದಿದೆ ಎಂದರು.

ರಾಷ್ಟ್ರೀಯ ಹೆದ್ದಾರಿಯನ್ನು ತಮ್ಮ ಸುಪರ್ದಿಗೆ ಪಡೆಯಬೇಕೆಂಬ ಏಕೈಕ ಉದ್ದೇಶದಿಂದ ಪಾಕಿಸ್ತಾನದವರು ನಮ್ಮೊಂದಿಗೆ ಜಗಳ ಶುರು ಮಾಡಿದರು. ಲೇಹ್ ಲಡಾಖ್, ಸಿಯಾಚಿನ್ ನಲ್ಲಿದ್ದ ನಮ್ಮ ಸೈನಿಕರಿಗೆ ಕುಡಿಯುವ ನೀರು, ಆಹಾರ ಪದಾರ್ಥ ತಲುಪಬಾರದೆಂದು ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ರಸ್ತೆ ಬಂದ್ ಮಾಡಿಸಿದರು. ಮಾ. 3ರಂದು ದನ ಮೇಯಿಸುವನ ವೇಷದಲ್ಲಿ ನಮ್ಮ ಸೈನಿಕನೊಬ್ಬ ಪಾಕಿಸ್ತಾನ ಸೈನಿಕರ ಬಳಿ ಹೋಗಿ ಅವರ ಷಡ್ಯಂತ್ರಗಳನ್ನೆಲ್ಲಾ ಅರಿತು ಮಾಹಿತಿ ನೀಡುತ್ತಾರೆ. ಆಗ ಸೈನಿಕರು ಎಚ್ಚೆತ್ತು ಪೆಟ್ರೊಲಿಂಗ್ (ಹುಡುಕಾಟ) ಶುರು ಮಾಡಿದರು. ಆದರೆ ಕುತಂತ್ರದಿಂದ ನಮ್ಮ ದೇಶದ ಐವರು ಸೈನಿಕರನ್ನು ಪಾಕಿಸ್ತಾನ ಸೇನೆ ಸೆರೆಯಾಗಿಸಿಕೊಂಡು ಅವರಿಗೆ ಚಿತ್ರಹಿಂಸೆ ನೀಡಿ ಅಮಾನುಷವಾಗಿ ಕೊಲೆ ಮಾಡುತ್ತದೆ. ಆ ಘಟನೆ ಬಳಿಕ ಅವರಿಗೂ ನಮಗೂ ದ್ವೇಷ ಬೆಳೆಯುತ್ತದೆಂದು ವಿವರಿಸಿದರು.

ಭಾರತದ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸೈನ್ಯಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಲ್ಲದೆ ಮೇ 22 ರಂದು ವಾಯುಪಡೆಯನ್ನು ಯುದ್ಧಕ್ಕೆ ನಿಯೋಜಿಸಿದರು. ಅಂದಾಜು 300 ಕಿ.ಮೀ. ವರೆಗೆ ಪಾಕಿಸ್ತಾನದ 5 ಸಾವಿರ ಸೈನಿಕರು ಶಸ್ತ್ರಾಸ್ತ್ರಗಳೊಂದಿಗೆ ಯುದ್ಧಕ್ಕೆ ಸಜ್ಜಾಗಿದ್ದರೆ ಭಾರತವು ಸಹ ಪ್ರತ್ಯುತ್ತರವಾಗಿ 20 ಸಾವಿರ ಸೈನಿಕರನ್ನು ಸ್ಥಳದಲ್ಲಿ ನಿಯೋಜಿಸುತ್ತದೆ. ಅತ್ಯಂತ ಪ್ರಬಲ ಪ್ರತ್ಯುತ್ತರದ ಮೂಲಕ ನಮ್ಮ ಸೇನೆ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸುತ್ತದೆಂದು ಯುದ್ಧದ ವಿವರ ನೀಡಿದರು.

ಯುವ ಸಮುದಾಯ ದೇಶ ಭಕ್ತಿ ಬೆಳೆಸಿಕೊಳ್ಳಬೇಕು. ರಾಷ್ಟ್ರದ ಭದ್ರತೆಗೆ ಧಕ್ಕೆಯಾದಾಗ ಪ್ರಾಣದ ಹಂಗು ತೊರೆದು ವಿರೋಧಿಗಳ ವಿರುದ್ಧ ಹೋರಾಟಕ್ಕೆ ಅಣಿಯಾಗಬೇಕು. ಎಲ್ಲರೂ ದೇಶಪ್ರೇಮ ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಜಿಲ್ಲಾ ರಾಷ್ಟ್ರೀಯ ಮಾಜಿ ಸೈನಿಕರ ಸಮನ್ವಯ ಸಮಿತಿ ಜಿಲ್ಲಾಧ್ಯಕ್ಷ ಪ್ರದೀಪ್, ಉಪಾಧ್ಯಕ್ಷ ವೆಂಕಟೇಶ್, ಕಮಾಂಡರ್ ಮಂಜುನಾಥ್, ತಾಲ್ಲೂಕು ಅಧ್ಯಕ್ಷರು ಹಾಗು ಪದಾಧಿಕಾರಿಗಳು ಹಾಜರಿದ್ದರು.

# ಭಾವ ಲಹರಿ

# ಬರವನ್ನು ಎದುರಿಸುವ ಬಲವಾದ ಇಚ್ಛಾಶಕ್ತಿ ಇದೆಯೇ?

■ **ರಾಜ್ಯದಲ್ಲಿ ಮಳೆ ಕೊರತೆಯ ತೀವ್ರತೆ ಎಷ್ಟಿದೆ ಎಂಬುದನ್ನು ಈ ಬಾರಿಯ ಅಂಕಿ-ಅಂಶಗಳು ಕಣ್ಣಿಗೆ ಕಟ್ಟುವಂತೆ ತೋರಿಸುತ್ತಿವೆ. ಜೂನ್ ತಿಂಗಳಲ್ಲಿ ರಾಜ್ಯವು ವಾಡಿಕೆಯ 199 ಮಿ.ಮೀ ಮಳೆಯ ಬದಲಾಗಿ ಕೇವಲ 116 ಮಿ.ಮೀ ಮಳೆಯನ್ನು ಪಡೆದಿದ್ದು, 42% ರಷ್ಟು ಬೃಹತ್ ಮಳೆ ಕೊರತೆ ದಾಖಲಾಗಿತ್ತು. ಜುಲೈ 11ರ ಅಂಕಿ-ಅಂಶಗಳ ಪ್ರಕಾರ, ವಾಡಿಕೆಯ 292 ಮಿ.ಮೀ ಮಳೆಯ ಬದಲಾಗಿ 203 ಮಿ.ಮೀ ಮಾತ್ರ ಸುರಿದಿದ್ದು, ರಾಜ್ಯದಲ್ಲಿ ಒಟ್ಟಾರೆ 30% ಮಳೆ ಕೊರತೆ ಉಂಟಾಗಿದೆ.**

ಗಂಟಾಘೋಷ

ಈ ವರ್ಷದ ಮುಂಗಾರು ಹಂಗಾಮಿನ ಮೇಲೆ ಎಲ್-ನಿನೋ ಪ್ರಭಾವದ ಕರಿನೆರಳು ದಟ್ಟವಾಗಿ ಆವರಿಸಿದ್ದು, ಮಳೆಯ ತೀವ್ರ ಕೊರತೆಯಿಂದಾಗಿ ಕರ್ನಾಟಕದ ರೈತಾಪಿ ವರ್ಗ ಅಕ್ಷರಶಃ ಕಂಗಾಲಾಗಿದೆ. ಮುಗಿಲತ್ತ ಮುಖ ಮಾಡಿ ಮಳೆಗಾಗಿ ಕಾಯುತ್ತಿದ್ದ ರೈತರಿಗೆ ಪ್ರಕೃತಿ ಕೈಕೊಟ್ಟರೆ, ಇನ್ನೊಂದೆಡೆ ಆಡಳಿತ ನಡೆಸುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರದ ನಿರ್ಲಕ್ಷ್ಯ ಮತ್ತು ಪೂರ್ವ ಸಿದ್ಧತೆಯ ಕೊರತೆ ರೈತರ ಗಾಯದ ಮೇಲೆ ಬರೆ ಎಳೆದಿದೆ. ರಾಜ್ಯದಾದ್ಯಂತ ಕೃಷಿ ವಲಯವು ತೀವ್ರ ಬಿಕ್ಕಟ್ಟಿಗೆ ಸಿಲುಕಿದ್ದರೂ, ಪ್ರಾಕೃತಿಕ ವಿಕೋಪಕ್ಕಿಂತ ಮಾನವ ನಿರ್ಮಿತ ಆಡಳಿತಾತ್ಮಕ ವೈಫಲ್ಯವೇ ಇಂದು ಅನ್ನದಾತನನ್ನು ಹೆಚ್ಚು ಕಾಡುತ್ತಿದೆ.

ರಾಜ್ಯದಲ್ಲಿ ಮಳೆ ಕೊರತೆಯ ತೀವ್ರತೆ ಎಷ್ಟಿದೆ ಎಂಬುದನ್ನು ಈ ಬಾರಿಯ ಅಂಕಿ-ಅಂಶಗಳು ಕಣ್ಣಿಗೆ ಕಟ್ಟುವಂತೆ ತೋರಿಸುತ್ತಿವೆ. ಜೂನ್ ತಿಂಗಳಲ್ಲಿ ರಾಜ್ಯವು ವಾಡಿಕೆಯ 199 ಮಿ.ಮೀ ಮಳೆಯ ಬದಲಾಗಿ ಕೇವಲ 116 ಮಿ.ಮೀ ಮಳೆಯನ್ನು ಪಡೆದಿದ್ದು, 42% ರಷ್ಟು ಬೃಹತ್ ಮಳೆ ಕೊರತೆ ದಾಖಲಾಗಿತ್ತು. ಜುಲೈ 11ರ ಅಂಕಿ-ಅಂಶಗಳ ಪ್ರಕಾರ, ವಾಡಿಕೆಯ 292 ಮಿ.ಮೀ ಮಳೆಯ ಬದಲಾಗಿ 203 ಮಿ.ಮೀ ಮಾತ್ರ ಸುರಿದಿದ್ದು, ರಾಜ್ಯದಲ್ಲಿ ಒಟ್ಟಾರೆ 30% ಮಳೆ ಕೊರತೆ ಉಂಟಾಗಿದೆ.

ರಾಜ್ಯದ 31 ಜಿಲ್ಲೆಗಳ ಪೈಕಿ 18 ಜಿಲ್ಲೆಗಳು ಹಾಗೂ 240 ತಾಲೂಕುಗಳ ಪೈಕಿ 141 ತಾಲೂಕುಗಳು ಭಾರಿ ಮಳೆ ಕೊರತೆಗೆ ತುತ್ತಾಗಿವೆ. ಕಾವೇರಿ ಮತ್ತು ತುಂಗಭದ್ರಾ ನದಿಗಳ ಪ್ರಮುಖ ಜಲಾನಯನ ಪ್ರದೇಶವಾದ ಮಲೆನಾಡು ಭಾಗದಲ್ಲಿ 34% ಮತ್ತು ಕರಾವಳಿ ಭಾಗದಲ್ಲಿ 30% ಮಳೆ ಕೊರತೆ ದಾಖಲಾಗಿದೆ. ಪ್ರಮುಖವಾಗಿ ಹಾಸನದಲ್ಲಿ 55%, ಶಿವಮೊಗ್ಗದಲ್ಲಿ 54%, ಮೈಸೂರಿನಲ್ಲಿ 51% ಹಾಗೂ ಕೊಡಗಿನಲ್ಲಿ 48% ರಷ್ಟು ಮಳೆ ಕೊರತೆಯಾಗಿದೆ.

ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಈ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಮುನ್ಸೂಚನೆ ಮೊದಲೇ ನೀಡಿದೆ. ಕರಾವಳಿ ಮತ್ತು ದಕ್ಷಿಣ ಒಳನಾಡು ಸೇರಿದಂತೆ ರಾಜ್ಯದಾದ್ಯಂತ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.

ಜನಸಾಮಾನ್ಯರ ಮೇಲಿನ ಪ್ರಭಾವ

ಮಳೆಯ ಅಭಾವದಿಂದಾಗಿ ಮುಂಗಾರು (ಖಾರಿಫ್) ಬಿತ್ತನೆ ಸಂಪೂರ್ಣವಾಗಿ ಕುಸಿದಿದೆ. ಈ ಬಾರಿ 84.1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಗುರಿ ಹೊಂದಲಾಗಿದ್ದರೂ, ಜುಲೈ ಮೊದಲ ವಾರದ ವರೆಗೆ ಕೇವಲ 28.3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ ಎಂದು ವರದಿಯಾಗಿದೆ. ಬಿತ್ತನೆ ಮಾಡಿದ ಅಲ್ಪಸ್ವಲ್ಪ ಬೆಳೆಗಳೂ ಸಹ (ಜೋಳ, ಮೆಕ್ಕೆಜೋಳ, ಸೋಯಾಬೀನ್, ಹತ್ತಿ) ತೇವಾಂಶವಿಲ್ಲದೆ ಒಣಗುತ್ತಿವೆ.

ಇನ್ನೊಂದೆಡೆ, ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿ



ಕೇವಲ 34% (ಅಂದರೆ 895.65 ಟಿಎಂಸಿ ಸಾಮರ್ಥ್ಯದಲ್ಲಿ ಕೇವಲ 303 ಟಿಎಂಸಿ) ನೀರು ಮಾತ್ರ ಸಂಗ್ರಹವಾಗಿದೆ. ಮಳೆ ಕೊರತೆಯಿಂದಾಗಿ ಕೇವಲ ರೈತರಿಗಷ್ಟೇ ಅಲ್ಲ, ಜನಸಾಮಾನ್ಯರಿಗೂ ಕುಡಿಯುವ ನೀರಿನ ಅಭಾವ ಹಾಗೂ ಮುಂಬರುವ ದಿನಗಳಲ್ಲಿ ತರಕಾರಿ ಮತ್ತು ದಿನಸಿ ಪದಾರ್ಥಗಳ ಬೆಲೆ ಏರಿಕೆಯ ಬಿಸಿ ತಟ್ಟುವುದು ನಿಶ್ಚಿತ. ಜಾನುವಾರುಗಳಿಗೆ ಮೇವಿನ ಕೊರತೆಯೂ ತೀವ್ರವಾಗಲಿದ್ದು, ಗ್ರಾಮೀಣ ಆರ್ಥಿಕತೆ ಸಂಪೂರ್ಣವಾಗಿ ಹದಗೆಡುವ ಹಂತದಲ್ಲಿದೆ.

ಪೂರ್ವಸಿದ್ಧತೆಯ ಕೊರತೆ

ಹವಾಮಾನ ಇಲಾಖೆಯು ಮೊದಲೇ ಎಲ್-ನಿನೋ ಪ್ರಭಾವ ಮತ್ತು ಭಾರಿ ಮಳೆ ಕೊರತೆಯ ಮುನ್ಸೂಚನೆಗಳನ್ನು ನೀಡಿದ್ದರೂ, ರಾಜ್ಯ ಸರಕಾರವು ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಬಿತ್ತನೆ ಹಂಗಾಮು ಆರಂಭವಾಗುವ ಮುನ್ನವೇ ಪರ್ಯಾಯ ಬೆಳೆ ಯೋಜನೆಗಳನ್ನು ರೂಪಿಸುವುದು, ಜಿಲ್ಲಾ ಮಟ್ಟದಲ್ಲಿ ತುರ್ತು ಬಿಕ್ಕಟ್ಟು ನಿರ್ವಹಣಾ ಕಾರ್ಯಪಡೆಗಳನ್ನು ರಚಿಸುವುದು ಅಥವಾ ಆತಂಕದಲ್ಲಿದ್ದ ರೈತರಿಗೆ ಧೈರ್ಯ ತುಂಬುವ ಯಾವುದೇ ವ್ಯವಸ್ಥಿತ ಕೆಲಸವನ್ನು ಆಡಳಿತ ಯಂತ್ರ ಮಾಡಲಿಲ್ಲ. ಕೃಷಿ ಬಿಕ್ಕಟ್ಟನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತಕ್ಷಣವೇ ರಾಜ್ಯ ಮಟ್ಟದ ಪರಿಹಾರ ಕಾರ್ಯಗಳಿಗೆ ಮುಂದಾಗುವ ಬದಲು, ಕೇವಲ ಕೇಂದ್ರದಿಂದ ಅಧ್ಯಯನ ತಂಡವನ್ನು ಕಳುಹಿಸುವಂತೆ ಕೋರಿ ಪ್ರಧಾನಿಗಳಿಗೆ ಪತ್ರ ಬರೆಯುವುದಕ್ಕಷ್ಟೇ ರಾಜ್ಯ ಸರಕಾರ ತನ್ನ ಹೊಣೆಗಾರಿಕೆಯನ್ನು ಸೀಮಿತ ಗೊಳಿಸಿ ಕೊಂಡಿದೆ.

ವಿಚಿತ್ರವಾದ ವಿಷಯವೆಂದರೆ, ಸರಕಾರದ ಇಡೀ ಸಿದ್ಧತೆಯು ಕೇವಲ ಪತ್ರಿಕಾ ಪ್ರಕಟಣೆಗಳು ಮತ್ತು ಸುದ್ದಿ ಮಾಧ್ಯಮಗಳ ಒಣ ಸಲಹೆಗಳಿಗಷ್ಟೇ ಸೀಮಿತವಾಗಿ ಉಳಿದುಕೊಂಡಿತು. ಮಳೆ ಕೊರತೆಯಿದೆ, ರೈತರು ಪರ್ಯಾಯ ಬೆಳೆ ಬೆಳೆಯಿರಿ ಎಂದು ಮಾಧ್ಯಮಗಳಲ್ಲಿ ಕೇವಲ ಪ್ರಚಾರ ಮಾಡಿದ ಸರಕಾರ, ತಳಮಟ್ಟದಲ್ಲಿ ಅದಕ್ಕೆ ಬೇಕಾದ ಯಾವುದೇ ಪ್ರಾಯೋಗಿಕ ವ್ಯವಸ್ಥೆಯನ್ನು ಮಾಡಲೇ ಇಲ್ಲ.

ಹೀಗೆ ಮುಂಗಾರು ಹಂಗಾಮಿನ ಆರಂಭದ ತಳಮಟ್ಟದ ತರಬೇತಿ ಮತ್ತು ಪೂರ್ವಸಿದ್ಧತೆಯ ಕೊರತೆಯಿದ್ದ ಕಾರಣ ರೈತರು ಅನಿವಾರ್ಯವಾಗಿ ತಮ್ಮ ಹಳೆಯ ಸಾಂಪ್ರದಾಯಿಕ ಬೆಳೆಗಳನ್ನೇ ನಂಬಿ ಬಿತ್ತನೆ ಮಾಡಿ ಇಂದು ಸಂಪೂರ್ಣ ಬೆಳೆ ನಷ್ಟದ ಭೀತಿಯಿಂದ ಕೈಸುಟ್ಟುಕೊಂಡಿದ್ದಾರೆ. ಸರಕಾರದ ಈ ರೀತಿಯ ನಿರಾಸಕ್ತಿ ಮತ್ತು ದೂರದೃಷ್ಟಿಯ ಕೊರತೆಯು ಇಡೀ ಗ್ರಾಮೀಣ ಕೃಷಿ ವ್ಯವಸ್ಥೆಯನ್ನೇ ಕರಾಳ ಕೂಪಕ್ಕೆ ತಳ್ಳಿದೆ. ಕೇವಲ ಮಾಧ್ಯಮಗಳ ಹೆಡ್‌ಲೈನ್‌ಗಳಲ್ಲಿ ಸಲಹೆ ನೀಡುವುದರಿಂದ ರೈತರ ಜಮೀನಿನಲ್ಲಿ ಬೆಳೆ ಬೆಳೆಯಲು ಸಾಧ್ಯವಿಲ್ಲ; ಸರಕಾರವು ಕಾಗದದ ಮೇಲಿನ ಯೋಜನೆಗಳನ್ನು ಬಿಟ್ಟು ತಳಮಟ್ಟದಲ್ಲಿ ಸಕ್ರಿಯವಾಗಿ ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳದ ಹೊರತು ಬರದ ಬೇಗೆಯಲ್ಲಿ ತತ್ತರಿಸುತ್ತಿರುವ ಅನ್ನದಾತನಿಗೆ ನ್ಯಾಯ ಸಿಗಲು ಸಾಧ್ಯವಿಲ್ಲ.


ಇಚ್ಛಾಶಕ್ತಿಯಿದೆಯೆ ಬರ ನಿರ್ವಹಣೆಗೆ?

ಸರಕಾರ ರಚಿಸುವಾಗ ಮತ್ತು ಅಧಿಕಾರದ ಗದ್ದುಗೆ ಹಿಡಿಯುವಾಗ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತೋರಿದ ಅದೇ ಅಗಾಧವಾದ ಇಚ್ಛಾಶಕ್ತಿ ಹಾಗೂ ಹೋರಾಟದ ಮನೋಭಾವವನ್ನು ಈಗ ಬರಗಾಲ ನಿರ್ವಹಣೆಯಲ್ಲೂ ತೋರುತ್ತಾರೆಯೇ? ಎಂಬುದು ರಾಜ್ಯದ ರೈತರ ಬಹುದೊಡ್ಡ ಪ್ರಶ್ನೆಯಾಗಿದೆ. ಏಕೆಂದರೆ ಈ ಹಿಂದೆ 2023-24ರ ಬರಗಾಲದ ಸಂದರ್ಭದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಬರ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದ್ದ ನೆನಪು ಇನ್ನೂ ಹಸಿಯಾಗಿಯೇ ಇದೆ.

ಆ ಸಮಯದಲ್ಲಿ ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ನಷ್ಟದ ವರದಿ ಸಲ್ಲಿಸಲು ಸಿದ್ದರಾಮಯ್ಯ ನವರ ಸರಕಾರ ಮೂರು ತಿಂಗಳು ಅನಗತ್ಯ ವಿಳಂಬ ಮಾಡಿತ್ತು ಮತ್ತು ಆಡಳಿತ ಯಂತ್ರವು ಆಂತರಿಕ ರಾಜಕೀಯದ ಮುಳುಗಿತ್ತು ಎಂದು ವಿರೋಧ ಪಕ್ಷಗಳು ತೀವ್ರವಾಗಿ ಟೀಕಿಸಿದ್ದವು. ತಳಮಟ್ಟದಲ್ಲಿ ರೈತರಿಗೆ ತಕ್ಷಣದ ಪರಿಹಾರ ಒದಗಿಸುವ ಕೆಲಸ ಮಾಡದೆ, ತನ್ನ ಆಡಳಿತಾತ್ಮಕ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸರಕಾರ ಕೇವಲ ಕೇಂದ್ರದ ಮೇಲೆ ಗೂಬೆ ಕೂರಿಸುವ ರಾಜಕೀಯಕ್ಕಷ್ಟೇ ಸೀಮಿತವಾಗಿತ್ತು ಎಂಬುದು ಈಗಾಗಲೇ ಸಾಬೀತಾಗಿದೆ. ಈ ಸರಕಾರವು ಅದೇ ಮಾದರಿ ಅನುಸರಿಸಿದರೆ ರಾಜ್ಯದ ರೈತರ ಗತಿ ಕೇಳದಂತಾಗುತ್ತದೆ.

ಕೇಂದ್ರದ ಎನ್‌ಡಿಆರ್‌ಎಫ್ ಅನುದಾನಕ್ಕಾಗಿ ಕಾಯುತ್ತಾ ಕಾಲಹರಣ ಮಾಡುವ ಬದಲು, ರಾಜ್ಯ ಸರಕಾರವು ತನ್ನ ಸುಪರ್ದಿಯಲ್ಲಿರುವ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ (ಎಸ್‌ಡಿಆರ್‌ಎಫ್) ತಕ್ಷಣವೇ ರೈತರ ಖಾತೆಗಳಿಗೆ ಮಧ್ಯಂತರ ಬೆಳೆ ನಷ್ಟ ಪರಿಹಾರವನ್ನು ಜಮಾ ಮಾಡಬೇಕು. ಎಸ್‌ಡಿಆರ್ ಎಫ್ ಎನ್ನುವುದು ಬರಗಾಲದಂತಹ ಪ್ರಾಕೃತಿಕ ವಿಕೋಪಗಳ ಸಮಯದಲ್ಲಿ ಸಂತ್ರಸ್ತರಿಗೆ ತಕ್ಷಣದ ಪರಿಹಾರ ಒದಗಿಸಲೆಂದೇ ಕಾಯ್ದಿರಿಸಲಾದ ಪ್ರಾಥಮಿಕ ಮೀಸಲು ನಿಧಿಯಾಗಿದೆ.

ವಿಪತ್ತು ನಿರ್ವಹಣಾ ನಿಯಮಗಳ ಪ್ರಕಾರ, ತಳಮಟ್ಟದಲ್ಲಿ ಸಂತ್ರಸ್ತರಿಗೆ ಪರಿಹಾರ ಹಣವನ್ನು ವಿತರಿಸುವ ಪ್ರಾಥಮಿಕ ಹೊಣೆಗಾರಿಕೆ ಸಂಪೂರ್ಣವಾಗಿ ರಾಜ್ಯ ಸರಕಾರದ್ದೇ ಆಗಿರುತ್ತದೆ. ಒಂದು ವೇಳೆ ರಾಜ್ಯ ಸರಕಾರವು ಪ್ರಸ್ತುತ ಎಸ್‌ಡಿಆರ್‌ಎಫ್ ಖಾತೆಯಲ್ಲಿ ರೈತರಿಗೆ ವಿತರಿಸಲು ಸಾಕಷ್ಟು ಹಣವಿಲ್ಲ ಎಂದು ಸಬೂಬು ಹೇಳುವುದಾದರೆ, ಮುಂಗಾರು ವೈಫಲ್ಯದ ಮುನ್ಸೂಚನೆ ಮೊದಲೇ ಇದ್ದಾಗ ರಾಜ್ಯ ಸರಕಾರ ತನ್ನ ಪಾಲಿನ ಮೀಸಲು ನಿಧಿಯಲ್ಲಿ ಮುಂಚಿತವಾಗಿಯೇ ಸಾಕಷ್ಟು ಹಣವನ್ನು ಏಕೆ ಕಾಯ್ದಿರಿಸಲಿಲ್ಲ? ಎಂಬ ಗಂಭೀರ ಪ್ರಶ್ನೆ ಏಳುತ್ತದೆ. ಮುಂಬರುವ ಸಂಭಾವ್ಯ ವಿಪತ್ತುಗಳನ್ನು ಎದುರಿಸಲು ರಾಜ್ಯದ ಬೊಕ್ಕಸದಲ್ಲಿ ಸಾಕಷ್ಟು ತುರ್ತು ಹಣವನ್ನು ಮೀಸಲಿಡದಿರುವುದು ಸರಕಾರದ ಆರ್ಥಿಕ ಬೇಜವಾಬ್ದಾರಿತನ ಮತ್ತು ಆಡಳಿತಾತ್ಮಕ ಅಸಮರ್ಥತೆಯನ್ನು ನಗ್ನವಾಗಿ ಎತ್ತಿ ತೋರಿಸುತ್ತದೆ.



ಪ್ರಸ್ತುತ ಇರುವ ತೇವಾಂಶ ಕೊರತೆಗೆ ತಕ್ಕಂತೆ ಕಡಿಮೆ ನೀರಿನಲ್ಲಿ ಕೈಗೆ ಬರುವ ರಾಗಿ, ನವಣೆ, ಸಾಮೆ ಹಾಗೂ ಹುರುಳಿಯಂತಹ ಅತ್ಯಂತ ಅಲ್ಪಾವಧಿಯ ಪರ್ಯಾಯ ಬೆಳೆಗಳ ಬಿತ್ತನೆ ಬೀಜಗಳನ್ನು ಕೃಷಿ ಇಲಾಖೆಯು ಯಾವುದೇ ಸಬೂಬು ನೀಡದೆ ನೇರವಾಗಿ ರೈತರ ಜಮೀನುಗಳಿಗೇ ತಲುಪಿಸ ಬೇಕು. ಕೇವಲ ಗೋಶಾಲೆಗಳನ್ನು ತೆರೆಯುವುದಷ್ಟೇ ಅಲ್ಲದೆ, ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ತಮ್ಮ ಜಾನುವಾರುಗಳನ್ನು ಕಟುಕರಿಗೆ ಅಥವಾ ದಳಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುವುದನ್ನು ತಡೆಯಲು ಉಚಿತವಾಗಿ ಮೇವಿನ ಮಿನಿ-ಕಿಟ್‌ಗಳನ್ನು ಪ್ರತಿ ಹಳ್ಳಿಯ ಹಂತದಲ್ಲೂ ವಿತರಿಸಬೇಕು.

ಜಲಾಶಯಗಳಲ್ಲಿ ನೀರು ತಳ ಮುಟ್ಟಿರುವುದರಿಂದ ಲಭ್ಯವಿರುವ ಅಲ್ಪಸ್ವಲ್ಪ ಅಂತರ್ಜಲವನ್ನೇ ಸಮರ್ಥವಾಗಿ ಬಳಸಿಕೊಳ್ಳಲು ಹನಿ ನೀರಾವರಿ ಮತ್ತು ತುಂತುರು ನೀರಾವರಿ ಪರಿಕರಗಳನ್ನು ತಕ್ಷಣವೇ ಭಾರಿ ಸಬ್ಸಿಡಿಯೊಂದಿಗೆ ಒದಗಿಸಬೇಕು ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ಕನಿಷ್ಠ 7 ಗಂಟೆಗಳ ಕಾಲ ನಿರಂತರ ತ್ರಿಫೇಸ್ ವಿದ್ಯುತ್ ಸಂಪರ್ಕ ಅಥವಾ ಡೀಸೆಲ್ ಸಬ್ಸಿಡಿಯನ್ನು ಘೋಷಿಸಬೇಕು.



ಗ್ರಾಮೀಣ ಭಾಗದ ಆರ್ಥಿಕ ಕುಸಿತ ಮತ್ತು ಜನರು ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುವುದನ್ನು ತಡೆಯಲು ವಿಕಸಿತ್ ಭಾರತ್- ಗ್ಯಾರಂಟಿ ಫಾರ್ ರೋಜ್ಗಾರ್ ಆಂಡ್ ಆಜೀವಿಕಾ ಮಿಷನ್ (ಗ್ರಾಮೀಣ್) ಅಥವಾ ವಿಬಿ-ಜಿ ರಾಮ್ ಜಿ (ಹಿಂದಿನ ನರೇಗಾ) ಯೋಜನೆಯಡಿ ನೀಡಲಾಗುವ ಉದ್ಯೋಗದ ದಿನಗಳನ್ನು ಈ 141 ಬರಪೀಡಿತ ತಾಲೂಕುಗಳಲ್ಲಿ ಕಡ್ಡಾಯವಾಗಿ ಪ್ರಸ್ತುತ ನಿಗದಿತ 125 ದಿನಗಳಿಂದ 150 ದಿನಗಳಿಗೆ ತಕ್ಷಣವೇ ಹೆಚ್ಚಿಸಬೇಕು. ಮತ್ತು ಕೂಲಿ ಹಣವನ್ನು ಬಾಕಿ ಉಳಿಸಿಕೊಳ್ಳದೆ ವಾರಕ್ಕೊಮ್ಮೆ ನೇರವಾಗಿ ಖಾತೆಗೆ ಜಮಾ ಮಾಡಬೇಕು.

ಮಾರುಕಟ್ಟೆಯಲ್ಲಿ ರೈತರು ಬೆಳೆದ ಅಲ್ಪಸ್ವಲ್ಪ ಮುಂಗಾರು ಬೆಳೆಗಳಿಗೆ ವ್ಯಾಪಾರಿಗಳು ತಮಗಿಷ್ಟ ಬಂದ ಹಾಗೆ ಕಡಿಮೆ ಬೆಲೆ ನಿಗದಿಪಡಿಸಿ ಸುಲಿಗೆ ಮಾಡುವುದನ್ನು ತಡೆಯಲು ಕಟ್ಟುನಿಟ್ಟಾದ ಮಾರುಕಟ್ಟೆ ಮಧ್ಯಸ್ಥಿಕೆ ಮತ್ತು ಕನಿಷ್ಠ ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು ಮುಂಚಿತವಾಗಿಯೇ ತಾಲೂಕು ಕೇಂದ್ರಗಳಲ್ಲಿ ಆರಂಭಿಸಬೇಕು. ಪ್ರತಿಯೊಂದು ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುವ ಬರ ಪರಿಹಾರ ನಿಯಂತ್ರಣ ಕೊಠಡಿಗಳನ್ನು ತೆರೆದು, ಕುಡಿಯುವ ನೀರು, ಮೇವು ಮತ್ತು ಬೆಳೆ ನಷ್ಟಕ್ಕೆ ಸಂಬಂಧಿಸಿದ ರೈತರ ದೂರುಗಳಿಗೆ ಸ್ಥಳದ ಪರಿಹಾರ ಒದಗಿಸುವ ಕಟ್ಟುನಿಟ್ಟಾದ ವ್ಯವಸ್ಥೆಯನ್ನು ಸರಕಾರ ಜಾರಿಗೆ ತರಬೇಕು.

ರಾಜ್ಯ ಸಹಕಾರಿ ಬ್ಯಾಂಕ್‌ಗಳಲ್ಲಿನ ರೈತರ ಸಾಲವನ್ನು ಮನ್ನಾ ಮಾಡಲು ಅಥವಾ ವಾಣಿಜ್ಯ ಬ್ಯಾಂಕ್‌ಗಳ ಸಾಲ ಮರುಪಾವತಿಯನ್ನು ಕನಿಷ್ಠ ಒಂದು ವರ್ಷ ಮುಂದೂಡಲು ಸರಕಾರ ದಿಟ್ಟ ಹೆಜ್ಜೆ ಇಡಬೇಕು. ಕನಿಷ್ಠ ಪಕ್ಷ ಈ ಮೊರಟೋರಿಯಂ ಅವಧಿಯ ಬಡ್ಡಿಯನ್ನು ಸರಕಾರವೇ ಸ್ವತಃ ಭರಿಸಿ ಬ್ಯಾಂಕುಗಳಿಗೆ ಪಾವತಿಸಬೇಕು ಮತ್ತು ಸಾಲವನ್ನು ಯಾವುದೇ ದಂಡವಿಲ್ಲದೆ ಮುಂದಿನ ವರ್ಷಕ್ಕೆ ನವೀಕರಿಸಬೇಕು. ಈ ಇಡೀ ಪ್ರಕ್ರಿಯೆಯನ್ನು ಎಷ್ಟು ವ್ಯವಸ್ಥಿತವಾಗಿ ಮಾಡಬೇಕೆಂದರೆ, ಮಳೆ ಕೊರತೆಯಿಂದ ತತ್ತರಿಸಿರುವ ರೈತರ ಸಿಬಿಲ್ ಸ್ಕೋರ್ ಮೇಲೆ ಯಾವುದೇ ರೀತಿಯ ನಕಾರಾತ್ಮಕ ಪರಿಣಾಮ ಬೀರಬಾರದು ಮತ್ತು ಭವಿಷ್ಯದಲ್ಲಿ ಅವರು ಮತ್ತೊಮ್ಮೆ ಸಾಲ ಪಡೆಯಲು ಯಾವುದೇ ತೊಂದರೆಯಾಗದಂತೆ ಸರಕಾರವು ಬ್ಯಾಂಕಿಂಗ್ ವಲಯದೊಂದಿಗೆ ಕಟ್ಟುನಿಟ್ಟಾದ ಒಪ್ಪಂದ ಮಾಡಿಕೊಳ್ಳಬೇಕು.

ಬರಗಾಲವು ಒಂದು ಪ್ರಾಕೃತಿಕ ಸವಾಲಾಗಿರಬಹುದು, ಆದರೆ ಅದನ್ನು ಎದುರಿಸಲು ಬಲವಾದ ರಾಜಕೀಯ ಇಚ್ಛಾಶಕ್ತಿ ಬೇಕು. ರೈತರು ಕೇವಲ ವೋಟ್ ಬ್ಯಾಂಕ್ ಅಲ್ಲ, ಅವರು ನಮ್ಮ ರಾಜ್ಯದ ಬೆನ್ನೆಲುಬು. ನೆಪ ಹೇಳುವ ರಾಜಕೀಯವನ್ನು ಬದಿಗಿಟ್ಟು, ತಕ್ಷಣವೇ ಪ್ರಾಮಾಣಿಕವಾಗಿ ಕಾರ್ಯ ಪ್ರವೃತ್ತರಾಗದಿದ್ದರೆ ಮುಂದಿನ ದಿನಗಳಲ್ಲಿ ರೈತರ ಆಕ್ರೋಶದ ಬೇಗೆಗೆ ಸರಕಾರ ತಕ್ಕ ಬೆಲೆ ತೆರಬೇಕಾಗುತ್ತದೆ.

**- ಗುರುರಾಜ್** ಗಂಟಿಹೊಳೆ

## ಕಾಣಿಸಿದರೆ ಭಾಗ್ಯ, ಕಾಣಿಸದಿದ್ದರೆ ಬೆರಗು!

**(ಮುಂದುವರೆದ ಭಾಗ)**

ಜೀವವಿಜ್ಞಾನಿಗಳು ತಲೆಕೆಡಿಸಿಕೊಂಡು ಇವುಗಳಿಗೆ ವೈಜ್ಞಾನಿಕ ಹೆಸರು ಕೊಡುತ್ತಾರೆ. ಹಾಗೆ ಹೆಸರು ಕೊಡುವಲ್ಲೂ ಕೆಲವು ತಮಾಷೆಗಳಿವೆ. ಅದನ್ನು ಆಮೇಲೆ ನೋಡೋಣ.

ಇದೊಂದು ಚೋದ್ಯ ಅಲ್ಲವೆ? ಜಗತ್ತಿನಾದ್ಯಂತ ಜೀವಿವೈವಿಧ್ಯ ತೀವ್ರ ಒತ್ತಡಕ್ಕೆ ಒಳಗಾಗಿ ನಶಿಸುತ್ತಿದೆ. ಹಲವು ಪ್ರಭೇದಗಳು ಅಳಿದಿವೆ, ಇನ್ನೊಂದಷ್ಟು ಅಳಿವಿನ ಅಂಚಿನಲ್ಲಿವೆ. ಅಂಥ ಹೊತ್ತಿನಲ್ಲಿ, ಪ್ರಕೃತಿ ಇನ್ನೂ ಅನೇಕ ರಹಸ್ಯಗಳನ್ನು ತನ್ನೊಳಗೆ ಅಡಗಿಸಿಕೊಂಡಿದೆ ಎಂದು ನಮ್ಮ ಅರಿವಿಗೆ ಬಂದಾಗ ರೋಮಾಂಚನ ಆಗುತ್ತದೆ. ಆದರೆ ಈ ರೋಮಾಂಚನದಲ್ಲಿ ಒಂದು ವಿಷಾದವೂ ಇದೆ. ಅದೆಂದರೆ ಈ ಹೊಸ ಶೋಧಗಳು ಅಳಿವಿನಂಚಿನ ಜೀವಿಗಳೇ ಆಗಿವೆ ಎಂಬುದು. ಅವು ಯಾವ ಕ್ಷಣದಲ್ಲೂ ನಶಿಸಬಹುದು. ವಿಜ್ಞಾನಿಗಳು ಈಗ ನೋಡಿರುವ ಜೀವಿಗಳೇ ಆ ಪ್ರಭೇದದ ಕೊನೆಯ ಕೊಂಡಿಗಳೂ ಆಗಿರಬಹುದು.

ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಪತ್ತೆಯಾದ ಒಂದು ಕುತೂಹಲಕಾರಿ ಜೀವಿಯ ಬಗ್ಗೆ ಹೇಳಬೇಕು. ಅದು ಕಂಡುಬಂದುದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಚಾರ್ಮಾಡಿ ಘಾಟಿಯ ಒಳಗೆಲ್ಲೋ ಇರುವ ಮಧುಗುಂಡಿ ಎಂಬ ಊರಿನ ಬಳಿ. ಇದೊಂದು ಜಿಗಿಯುವ ಜೇಡ. ಇದಕ್ಕೆ ವಿಜ್ಞಾನಿಗಳು ಈಗ ಇಟ್ಟ ಹೆಸರು ಪಿಲಿಯಾ ಮಲೆನಾಡು! ಪಿಲಿಯಾ ಎಂಬುದು ಕುಲದ ಹೆಸರು. ಮಲೆನಾಡು ಎಂಬುದು ಪಶ್ಚಿಮ ಘಟ್ಟಗಳನ್ನು ಒಳಗೊಂಡ ಕರ್ನಾಟಕದ ಮಲೆನಾಡು ಪ್ರದೇಶದ ಗೌರವಾರ್ಥ ಕೊಟ್ಟ ಜಾತಿಯ (ಪ್ರಭೇದ) ಹೆಸರು. ಅಂದ ಹಾಗೆ ಪಿಲಿಯಾ ಕುಲದಲ್ಲಿ ಇರುವುದು ಮೂರು ಪ್ರಭೇದದ ಜಿಗಿಯುವ ಜೇಡಗಳು. ಅದರಲ್ಲಿ ಇದು ಹೊಸದು.

ಈ ಕುಲದ ಜಿಗಿಯುವ ಜೇಡವೊಂದು ಹೊಸದಾಗಿ ಕಾಣಿಸಿಕೊಂಡೇ 123 ವರ್ಷಗಳಾದವು. ಆದ್ದರಿಂದ ಇದು ಕರ್ನಾಟಕಕ್ಕೂ, ಭಾರತಕ್ಕೂ, ಜೀವವಿಜ್ಞಾನಕ್ಕೂ ಅಚ್ಚರಿಯ, ಮಹತ್ವದ ಸೇರ್ಪಡೆ. ಇದೇ ಮೊದಲ ಬಾರಿಗೆ ಈ ಕುಲದ ಹೆಣ್ಣು ಜೇಡದ ಮಾದರಿಯನ್ನೂ ವಿಜ್ಞಾನಿಗಳು ಅಲ್ಲೇ ದಾಖಲಿಸಿದ್ದಾರೆ. ಪಿಲಿಯಾ ಎಂಬ ಕುಲವನ್ನು ಮೊದಲ ಬಾರಿಗೆ 1902ರಲ್ಲಿ ಫ್ರೆಂಚ್ ಕೀಟಶಾಸ್ತ್ರಜ್ಞ ಯೂಜಿನ್ ಸೈಮನ್ ಗುರುತಿಸಿದ್ದ. ಆ ಬಳಿಕ ಈ ಕುಲದ ಬಗ್ಗೆ ಹೆಚ್ಚಿನ ಮಾಹಿತಿ ಸಿಕ್ಕಿರಲಿಲ್ಲ, ಇದುವರೆಗೆ ಈ ಕುಲದಲ್ಲಿ ಕೇವಲ ಮೂರು ಪ್ರಭೇದಗಳು ತಿಳಿದಿದ್ದವು. ಅವುಗಳಲ್ಲಿಯೂ ಗಂಡು ಜೇಡ ಮಾತ್ರ ವಿಜ್ಞಾನಿಗಳಿಗೆ ಸಿಕ್ಕಿದ್ದವು. ಈ ಬಾರಿ ಸಂಶೋಧಕರಿಗೆ ಗಂಡು- ಹೆಣ್ಣು ಎರಡೂ ದೊರೆತಿವೆ. ನಮ್ಮ ಪಶ್ಚಿಮ ಘಟ್ಟಗಳ ಜೀವವೈವಿಧ್ಯದ ಶ್ರೀಮಂತಿಕೆ ಎಂಥದು ಎನ್ನುವುದಕ್ಕೆ ಇದು ಇನ್ನೊಂದು ಉದಾಹರಣೆ.

ಈ ವರ್ಷದ ಪ್ರಮುಖ ಶೋಧಗಳಲ್ಲಿ ಇನ್ನೊಂದು, ಉತ್ತರಾಖಂಡದಲ್ಲಿ ಪತ್ತೆಯಾದ ಮಯೋಟಿಸ್ ಹಿಮಾಲಯೈಕಸ್ ಎಂಬ ಉದ್ದಬಾಲದ ಬಾವಲಿ. ಇದರ ಕಣ್ಣುಗಳ ಸುತ್ತ ಕೂದಲಿಲ್ಲದ ಚರ್ಮದ ವಲಯವಿದೆ. ಅದರ ಬಾಲ ದೇಹದಷ್ಟೇ ಉದ್ದ.


ಇನ್ನೊಂದು ಗಮನಾರ್ಹ ಪತ್ತೆ ಇರ್ವಿನ್ ವುಲ್ ಸ್ನೇಕ್. ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ಪತ್ತೆಯಾದ ಇದು ವಿಷರಹಿತ ಹಾವು. ಖ್ಯಾತ ವನ್ಯಜೀವಿ ಸಂರಕ್ಷಣಾವಾದಿ, ಸ್ಟೀವ್ ಇರ್ವಿನ್ ಅವರ ಗೌರವಾರ್ಥ ಈ ಹಾವಿಗೆ ಅವರ ಹೆಸರು. ಸಾಹಸಿ ಸ್ಟೀವ್ ಇರ್ವಿನ್, ಸ್ಟಿಂಗ್ ರೇ ಮೀನಿನಿಂದ ಕಡಿಸಿಕೊಂಡು ಸಮುದ್ರದಾಳದಲ್ಲಿ ಮೃತಪಟ್ಟಿದ್ದರು.

2025ರಲ್ಲಿ ಕೇರಳದಲ್ಲಿ ಅತಿ ಹೆಚ್ಚು ಹೊಸ ಪ್ರಾಣಿ ಪ್ರಭೇದಗಳು ದಾಖಲಾಗಿವೆ. ಕೇರಳದ ನಂತರದ ಸ್ಥಾನ ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ಅರುಣಾಚಲ ಪ್ರದೇಶಗಳದು. ಈ ಎಲ್ಲ ಪ್ರದೇಶಗಳಲ್ಲಿ ಹಲವು ದಶಕಗಳಿಂದ ಸಂಶೋಧನೆ ನಡೆಯುತ್ತಿದ್ದರೂ, ವಿಜ್ಞಾನಕ್ಕೆ ತಿಳಿದಿರದ ಹೊಸ ಜೀವಿಗಳು ಇನ್ನೂ ಪತ್ತೆಯಾಗುತ್ತಲೇ ಇವೆ. ಜೀವವೈವಿಧ್ಯ ನಿರಂತರವಾಗಿ ರೂಪಾಂತರಗೊಳ್ಳುತ್ತಿದ್ದು, ಇನ್ನೂ ಅನೇಕ ಸಂಗತಿಗಳು ಅನ್ವೇಷಣೆಗೆ ಕಾಯುತ್ತಿವೆ ಎಂಬುದನ್ನು ಈ ಪತ್ತೆಗಳು ತೋರಿಸಿವೆ.

ಬರೀ ಪ್ರಾಣಿಗಳಲ್ಲ, ಭಾರತೀಯ ಸಸ್ಯ ಸರ್ವೇಕ್ಷಣಾ ಸಂಸ್ಥೆ ಕೂಡ 2025ರಲ್ಲಿ ಮಹತ್ವದ ಸಾಧನೆ ಮಾಡಿದೆ. ಒಟ್ಟು 353 ಸಸ್ಯ ವೈವಿಧ್ಯಗಳನ್ನು ದಾಖಲಿಸಲಾಗಿದ್ದು, ಅವುಗಳಲ್ಲಿ 221 ವಿಜ್ಞಾನಕ್ಕೆ ಹೊಸ ಪ್ರಭೇದಗಳು. 132 ಸಸ್ಯಗಳನ್ನು ಭಾರತದಲ್ಲಿ ಮೊದಲ ಬಾರಿಗೆ ದಾಖಲಿಸಲಾಗಿದೆ. ಸಸ್ಯ ಸಂಶೋಧನೆಗಳಲ್ಲಿ ಅರುಣಾಚಲ ಪ್ರದೇಶ ಮೊದಲ ಸ್ಥಾನ. ನಂತರ ಉತ್ತರಾಖಂಡ ಮತ್ತು ಕೇರಳ. ಪಶ್ಚಿಮ ಘಟ್ಟಗಳಲ್ಲಿ ಕಾಡು ಸೀತಾಫಲದ ಗಿಡ ಕಂಡುಬಂತು.

ಇನ್ನೂ ಅಪರೂಪದ ಜೀವಿಗಳು ಈ ಪ್ರದೇಶದಲ್ಲಿ ಇರಬಹುದಲ್ವಾ? ಖಂಡಿತ ಇರಬಹುದು. ಸಂಶೋಧನೆ ನಡೆಯಬೇಕು. ರಸ್ತೆಗಳು, ರೆಸಾರ್ಟ್‌ಗಳು, ಪೈಪ್‌ಲೈನ್‌ಗಳು, ವಿದ್ಯುತ್ ಕೇಬಲ್‌ಗಳು, ಮಾನವ ಚಟುವಟಿಕೆ ಹೆಚ್ಚಿದಷ್ಟು ಇವು ಕಣ್ಮರೆಯಾಗುತ್ತವೆ. ಭಾರತದ ಕಾಡುಗಳು, ಪರ್ವತಗಳು, ನದಿಗಳು, ದ್ವೀಪಗಳು ಇನ್ನೂ ವಿಜ್ಞಾನಕ್ಕೆ ತಿಳಿದಿರದ ಹೊಸ ಜೀವಿಗಳನ್ನು ಅನಾವರಣ ಗೊಳಿಸುತ್ತಿವೆ. ಪ್ರಕೃತಿಯಲ್ಲಿ ಇನ್ನೂ ಅನ್ವೇಷಿಸಬೇಕಾದ ಹಾಗೂ ಸಂರಕ್ಷಿಸಬೇಕಾದ ಅಪಾರ ಸಂಪತ್ತು ಉಳಿದಿದೆ. ರಕ್ಷಣೆಯೇ ಸವಾಲು.

ಅಂದ ಹಾಗೆ, ವಯನಾಡಿನ ಕಾಡಿನ ನಡುವೆ ಗಾರ್ಡ್ ಜೊತೆಗೆ ಮೌನವಾಗಿ ಕಾದು ಕುಳಿತ ನನಗೆ



ಫಿಶಿಂಗ್ ಸ್ಪೈಡರ್ ಕೊನೆಗೂ ಕಾಣಿಸಲಿಲ್ಲ. ಬೇಸರವಿಲ್ಲ, ಅದು ಮನುಷ್ಯರ ಕಣ್ಣಿಗೆ ಕಾಣಿಸದ ನಿಗೂಢ ತಾಣವನ್ನು ಆರಿಸಿಕೊಂಡಿರಬಹುದು. ಒಳ್ಳೆಯದೇ. ಇನ್ನೊಮ್ಮೆ ಹೋದಾಗ ಕಾಣಿಸಲೂ ಬಹುದು. ಕಾಣಿಸಿದರೆ ಭಾಗ್ಯ. ಕಾಣಿಸದಿದ್ದರೆ ಬೆರಗು.

**- ಹರೀಶ್** ಕೇರ

## ಶಿವ ಮಯವಾದ ಗೋಕುಲ

ಕೃಷ್ಣ ಜನಿಸುವಾಗ ಶಿವನು ಸಮಾಧಿ ಸ್ಥಿತಿಯಲ್ಲಿದ್ದನು. ಎಚ್ಚರವಾದ ಮೇಲೆ ಗೋಕುಲದಲ್ಲಿ ಕೃಷ್ಣನು ಬಾಲ ಕೃಷ್ಣನ ರೂಪದಲ್ಲಿರುವುದು ತಿಳಿಯಿತು. ಬಾಲಕೃಷ್ಣನನ್ನು ನೋಡಬೇಕೆಂದು ಶಿವನಿಗೆ ಆಸೆಯಾಯಿತು. ಕೂಡಲೇ ಯೋಗಿಯ ರೂಪ ಧರಿಸಿ ತನ್ನ ಗಣಗಳಾದ ನಂದಿ ಬೃಂಗಿಯರನ್ನೇ ಶಿಷ್ಯರನ್ನಾಗಿ ಮಾಡಿಕೊಂಡು ಜೈ ಅಲಕ್ ನಿರಂಜನ್ ಎಂದು ಹೇಳುತ್ತಾ ಗೋಕುಲಕ್ಕೆ ಬಂದನು.

ಗೋಕುಲದ ನಂದ ಭವನದ ಮುಖ್ಯದ್ವಾರದ ಮುಂದೆ ನಿಂತು ಜೈ ಅಲಕ್ ನಿರಂಜನ್ ಎಂದು ಹೇಳಿದಾಗ ಆ ಭವನದಲ್ಲಿನ ದಾಸಿ ಒಬ್ಬಳು ಭಿಕ್ಷೆಯನ್ನು ತಂದು ಯೋಗಿಯ ಮುಂದೆ ಹಿಡಿದು ನೀವು ಇದನ್ನು ಸ್ವೀಕರಿಸಿ ಬಾಲ ಕೃಷ್ಣನಿಗೆ ಆಶೀರ್ವಾದ ಮಾಡಬೇಕೆಂದು ಯಶೋದ ತಾಯಿ ತಿಳಿಸಿದ್ದಾರೆ ಎಂದಳು. ಶಿವನು ಹೇಳಿದ ನಾನು ಭಿಕ್ಷೆಯನ್ನು ಸ್ವೀಕರಿಸಲು ಬಂದಿಲ್ಲ. ಗೋಕುಲದಲ್ಲಿ ಯಶೋದಾ ನಂದರ ಮನೆಯಲ್ಲಿ ಬಾಲಕನು ಜನಿಸಿದ್ದಾನೆ. ಆ ಮಗುವನ್ನು ನೋಡಲು ಬಂದಿದ್ದೇನೆ ಎಂದನು.

ದಾಸಿಯು ಒಳಗೆ ಹೋಗಿ ಯಶೋದ ತಾಯಿಗೆ ಈ ಮಾತನ್ನು ಹೇಳಿದಳು ಯಶೋದೆಗೆ ಇದನ್ನು ಕೇಳಿ ಆಶ್ಚರ್ಯವಾಗಿ ಬಂದವರು ಯಾರಿರಬಹುದು ಎಂದು ಒಳಗಿನ ಕಿಟಕಿಯಿಂದ ಹೊರಗೆ ಬಾಗಿಲಲ್ಲಿ ನಿಂತಿದ್ದ ಯೋಗಿಯನ್ನು ನೋಡಿದಳು. ಬಹಳ ಎತ್ತರವಾಗಿದ್ದ ಯೋಗಿ ವ್ಯಾಘ್ರ ಚರ್ಮ ಧರಿಸಿದ್ದಾನೆ, ಕೈಯಲ್ಲಿ ತ್ರಿಶೂಲ ಹಿಡಿದಿದ್ದಾನೆ, ತಲೆಯಲ್ಲಿ ದೊಡ್ಡ ಜಟೆ ಇದೆ. ಕೊರಳಲ್ಲಿ ಸರ್ಪ ಸುತ್ತಿಕೊಂಡಿದ್ದಾನೆ. ಅವಳಿಗೆ ಸ್ವಲ್ಪ ಭಯವಾಯಿತು. ಕೂಡಲೇ ಹೊರಗೆ ಬಂದು ಸಾಧುಗೆ ಭಕ್ತಿಯಿಂದ ನಮಸ್ಕರಿಸಿ, ಸ್ವಾಮಿ ನನ್ನ ಕಂದನನ್ನು ತಂದು ನಿಮಗೆ ತೋರಿಸುವುದಿಲ್ಲ ಏಕೆಂದರೆ, ನಿಮ್ಮ ಕುತ್ತಿಗೆಯಲ್ಲಿರುವ ದೊಡ್ಡ ಸರ್ಪವನ್ನು ನೋಡಿ ನನ್ನ ಕಂದ ಹೆದರುತ್ತಾನೆ. ಇದನ್ನು ಕೇಳಿ ನಗುತ್ತಾ ಶಿವನು ಹೇಳಿದನು. ಮಾತೆ ನೀನು ಚಿಂತಿಸದಿರು ನಿನ್ನ ಮುದ್ದು ಲಲ್ಲಾನು ಹೆದರುವುದಿಲ್ಲ ಏಕೆಂದರೆ ಅವನು ಕಾಲನಿಗೆ ಕಾಲ, ಬ್ರಹ್ಮನಿಗೆ ಬ್ರಹ್ಮ ಅವನು ಯಾರಿಗೂ ಹೆದರುವುದಿಲ್ಲ. ಯಾರ ದೃಷ್ಟಿಯೂ ಅವನಿಗೆ ತಾಕುವುದಿಲ್ಲ, ನಾನು ಯಾರೆಂದು ಅವನಿಗೆ ಗೊತ್ತು ನಮ್ಮಿಬ್ಬರದು ಜನ್ಮ ಜನ್ಮಾಂತರದ ಸಂಬಂಧ ನನ್ನನ್ನು ನೋಡಿದರೆ ಸಂತೋಷ ಪಡುತ್ತಾನೆ. ಈಗ ನಾನು ನಿನ್ನ ಕಂದನನ್ನು ಕಣ್ತುಂಬ ನೋಡಲು ಬಂದಿರುವೆ ನೀನು ತಂದು ತೋರಿಸುವುದಿಲ್ಲ ಎಂದರೆ ಅವನನ್ನು ನೋಡದ ಹೊರತು ನಾನು ಇಲ್ಲಿಂದ ಹೋಗುವುದಿಲ್ಲ, ಒಂದು ಹನಿ ನೀರನ್ನೂ ಕುಡಿಯುವುದಿಲ್ಲ ಹಾಗೆ ಇಲ್ಲಿಯೇ ಸಮಾಧಿ ಸ್ಥಿತಿಯಲ್ಲಿ ಕುಳಿತಿರುವೆ ಎಂದು ಗೋಕುಲದಲ್ಲಿದ್ದ ಮಹಾದೇವನ ಮಂದಿರದ ಮುಂದೆ ಬಾಲಕೃಷ್ಣನನ್ನು ನೋಡಲು ಕಾದು ಕುಳಿತನು.




ಇತ್ತ ಒಳಗಡೆ ಸ್ವಲ್ಪ ಹೊತ್ತಿಗೆ ಕೃಷ್ಣನು ಜೋರಾಗಿ ಅಳಲು ಶುರು ಮಾಡಿದ. ತಾಯಿ ಯಶೋದೆ ತನ್ನ ಮಡಿಲಲ್ಲಿ ಹಾಕಿಕೊಂಡು ಹಾಲು ಕುಡಿಸಿದಳು. ಗಿಲಕಿಯನ್ನು ಶಬ್ದ ಮಾಡಿದಳು, ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗಿದಳು. ತೊಟ್ಟಿಲಿಗೆ ಕಟ್ಟಿದ್ದ ಗಿಳಿಗಳನ್ನು ಅತ್ತ ಇತ್ತ ತಿರುಗಿಸಿದಳು. ಆದರೆ ಯಶೋದನ ಕಂದ ಹಠ ನಿಲ್ಲಿಸಲಿಲ್ಲ ಇನ್ನೂ ಜೋರಾಗಿ ಅಳಲು ಶುರು ಮಾಡಿದನು. ಇವನ ಅಳು ಕೇಳಿ ನೆರೆಯವರೆಲ್ಲ ಸೇರಿದರು. ಅಲ್ಲಿಗೆ ಬಂದ ದಾಸಿ ಯಶೋದೆಗೆ ಬೆಳಗ್ಗೆ ಬಂದ ಸಾಧುವು ಇವನ ಮೇಲೆ ಯಾವುದೋ ಪ್ರಯೋಗ ಮಾಡಿರಬೇಕು ಅದಕ್ಕೋಸ್ಕರನಲ್ಲ ಅಳುತ್ತಿದ್ದಾನೆ ಎಂದಳು. ಹೆದರಿ ನಡುಗಿದ ಯಶೋಧ ತನ್ನ ಮಗುವಿಗೆ ದೃಷ್ಟಿ ತಾಕಿದೆ ಪರಿಹಾರ ಮಾಡಬೇಕೆಂದು ಹತ್ತಿರದಲ್ಲಿದ್ದ ಶಾಂಡಿಲ್ಯ ಮಹರ್ಷಿಗಳನ್ನು ಕರೆಸಿದಳು.

ಮಹರ್ಷಿಗಳು ಬಂದು ಕಣ್ಮುಚ್ಚಿ ಧ್ಯಾನಿಸಿ ಗಮನಿಸಿದರು. ಬಾಲಕೃಷ್ಣನ ದರ್ಶನ ಮಾಡಲು ಭಗವಂತ ಮಹಾಶಿವನು ಧರೆಗಿಳಿದು ಬಂದಿದ್ದಾನೆ ಎಂಬುದು ತಿಳಿಯಿತು. ಕೊಡಲೆ ಯಶೋದೆಯನ್ನು ಕರೆದು ಹೇಳಿದರು. ಹೊರಗಡೆ ಕಾಯುತ್ತಾ ಕುಳಿತಿರುವ ಸಾಧುಗಳಿಗೆ ನಿನ್ನ ಕಂದನ ಸ್ಪರ್ಶ ಮತ್ತು ದರ್ಶನ ಮಾಡಿಸು ಇವರಿಬ್ಬರದು ಜನ್ಮಾಂತರದ ಸಂಬಂಧವಿದೆ ಎಂದು ಯಶೋದೆಗೆ ಹೇಳಿದರು. ಯಶೋದೆ ತನ್ನ ತೊಟ್ಟಿಲ ಕಂದನನ್ನು ಎತ್ತಿಕೊಂಡು ಚೆನ್ನಾಗಿ ಅಲಂಕರಿಸಿದಳು. ಪೀತಾಂಬರ ಉಡಿಸಿದಳು, ಕಾಲಿಗೆ ಗೆಜ್ಜೆ- ಕಾಲ ಬಳೆ -ಸೊಂಟಕ್ಕೆ ಉಡದಾರ- ಕೈಗೆ ಬಳೆ- ಕುತ್ತಿಗೆಗೆ ಹಾರ ಎಲ್ಲವನ್ನು ಹಾಕಿದಳು- ತಿಲಕ ಇಟ್ಟಳು- ಕೂದಲನ್ನು ಸೇರಿಸಿ ಜುಟ್ಟು ಕಟ್ಟಿ ದಂಡೆ ಮುಡಿಸಿದಳು. ಕಡೆಯದಾಗಿ ಕೆನ್ನೆ ಮೇಲೆ ದೃಷ್ಟಿ ಬೊಟ್ಟು ಇಟ್ಟಳು. ಕೈಯಿಂದ ನಿವಾಳಿಸಿ ಲಟಿಕೆ ತೆಗೆದಳು. ನಂತರ ಶಿವನನ್ನು ಒಳಗೆ ಕರೆದು ಕೃಷ್ಣನನ್ನು ತೋರಿಸಿದಳು. ಕೃಷ್ಣ ಮತ್ತು ಶಿವನ ದೃಷ್ಟಿ ಒಂದುಗೂಡಿದಾಗ ಕೃಷ್ಣನು ಅಳುವನ್ನು ನಿಲ್ಲಿಸಿ ಜೋರಾಗಿ ನಗಲು ಪ್ರಾರಂಭಿಸಿದ. ಬಾಲಕೃಷ್ಣ ಶಿವನನ್ನು ನೋಡಿ ಆನಂದದಿಂದ ಅವನ ಕೈ ಮೇಲೆ ಎಗರಿ ಎಗರಿ ಹಾರುತ್ತಿದ್ದ. ಹೀಗೆ ನಗುತ್ತಾ ಆಡುವ ತನ್ನ ಕಂದನನ್ನು ನೋಡಿ ಯಶೋದೆಗೆ ಸಮಾಧಾನವಾಯಿತು. ಅವಳು ಶಿವನಿಗೆ ನಮಸ್ಕರಿಸಿ ತನ್ನ ಕಂದನನ್ನು ಶಿವನ ಕೈಗೆ ಕೊಟ್ಟು ನನ್ನ ಕಂದನಿಗೆ ಯಾರ ದೃಷ್ಟಿಯು ತಾಗದಂತೆ ಆಶೀರ್ವದಿಸಿ ಎಂದಳು.

ಯೋಗಿ ರೂಪದಿಂದ ಬಂದ ಶಿವ ಬಾಲಕೃಷ್ಣನನ್ನು ಹರಸಿದನು. ಮುದ್ದಾದ ಮಗುವನ್ನು ಕೈಯಲ್ಲಿ ಎತ್ತಿಕೊಂಡ ಶಿವನು ನಂದನ ಮನೆಯ ಮುಂದಿನ ಅಂಗಳದಲ್ಲಿ ಕುಣಿಯಲು ಪ್ರಾರಂಭಿಸಿದ ಕುಣಿಯುತ್ತ ಕುಣಿಯುತ್ತ ನರ್ತನ ಜೋರಾಯಿತು ಅದೆಂಥ ಕುಣಿತ ಮನೆಯವರೆಲ್ಲ ಬೆರಗಾಗಿ ನೋಡುತ್ತಿದ್ದರು. ನಭೋ ಮಂಡಲದಲ್ಲಿ ದೇವಾನುದೇವತೆಗಳು ನಿಂತು ಈ ದೃಶ್ಯವನ್ನು ಕಣ್ತುಂಬ ನೋಡಿ ಆನಂದಿಸಿದರು. ಬಾಲಕೃಷ್ಣನ ಎತ್ತಿಕೊಂಡು ಆನಂದದಿಂದ ಕುಣಿಯುತ್ತಿದ್ದ ಶಿವನ ನೃತ್ಯವನ್ನು ನೋಡಲು ಊರಿಗೆ ಊರೇ ನೆರೆಯಿತು. ಪೂರ್ತಿ ನಂದಗೋಕುಲ ಶಿವ ಮಯದಿಂದ ತುಂಬಿ ಹೋಯಿತು.

ಆಗಿನ ಕಾಲದಲ್ಲಿ ನಂದನ ಊರು ಬೆಟ್ಟದ ತಪ್ಪಲಲ್ಲಿತ್ತು. ಈಗ ಆ ಬೆಟ್ಟವನ್ನು ಕೆಳಗೆ ನಿಂತು ಎತ್ತರಕ್ಕೆ ನೋಡಿದರೆ ಬೆಟ್ಟವು ಸಮಾಧಿ ಸ್ಥಿತಿಯಲ್ಲಿ ಕುಳಿತಿರುವ ಶಿವನ ಆಕೃತಿಯಂತೆ ಕಾಣುತ್ತದೆ. (ಇಡೀ ಬೆಟ್ಟವೇ ಶಿವನಂತಿದೆ) ಯೋಗಿಯಾಗಿ ಬಂದ ಶಿವನು ಬಾಲಕೃಷ್ಣನನ್ನು ನೋಡಿ ಯೋಗೀಶ್ವರನಾಗಿ ಕೃಷ್ಣನನ್ನು ಧ್ಯಾನಿಸಿದನು. ಯೋಗೇಶ್ವರನಾದ ಕೃಷ್ಣನು ಶಿವನಿಗೆ ಹೇಳಿದ ನನಗೆ ನಿಮಗಿಂತ ಪ್ರಿಯರಾದವರು ಈ ಜಗತ್ತಿನಲ್ಲಿ ಯಾರು ಇಲ್ಲ. ಪರಮೇಶ್ವರ ನೀವು ನನಗೆ ಎಷ್ಟು ಪ್ರಿಯರೆಂದರೆ ನನ್ನ ಆತ್ಮಕ್ಕಿಂತಲೂ ನೀವೇ ಹೆಚ್ಚು ಎಂದು ಕೃಷ್ಣ ಆನಂದದಿಂದ ಹೇಳಿ ಶಿವನಿಗೆ ನಮಸ್ಕರಿಸಿದನು.



**ವಸುದೇವಸುತಂ ದೇವಂ ಕಂಸ ಚಾಣೂರ ಮರ್ಧನಂ !**
**ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ !!**
**ವಸದೇವನ ಮಗನಾದ ಸದಾ ದೇವಕಿಗೆ ಪರಮಾನಂದವನ್ನು ಕೊಡುವ,**
**ಕಂಸ ಚಾಣೂರರನ್ನು ನಾಶ ಮಾಡಿದ ಜಗತ್ತಿನ ಗುರುವಾದ ಕೃಷ್ಣನಿಗೆ ನಮಿಸುವೆನು.**
**ಗೋಪಿಕಾನಾಂ ಕುಚದ್ವಂದ್ವ ಕುಂಕುಮಾಂಕಿತ ವಕ್ಷಸಂ !**
**ಶ್ರೀನಿಕೇತಂ ಮಹೇಶ್ವಾಸಂ ಕೃಷ್ಣಂ ವಂದೇ ಜಗದ್ಗುರುಂ !!**
**ಗೋಪಿಕೆಯರಿಗೆ ಪ್ರಿಯನಾದ, ಹೃದಯ ಭಾಗದಲ್ಲಿ ಕುಂಕುಮದ ಗುರುತಿರುವ, ಎಲ್ಲಾ ಸೌಭಾಗ್ಯಗಳಿಗೂ ಕಾರಣನಾದ, ಜಗತ್ತಿನ ಗುರುವಾದ ಕೃಷ್ಣನಿಗೆ ನಮಿಸುವೆನು.**
**ವಂದನೆಗಳೊಂದಿಗೆ,**

**- ಆಶಾ** ನಾಗಭೂಷಣ.

# ರಿಷಿಕಾಂತ್ ಸಿಂಗ್‌ಗೆ ಬೆಳ್ಳಿ ಪದಕ



• ಪ್ರಜೋದಯ ವರದಿ

**ಗ್ಲಾಸ್ಗೊ:** ಕಾಮನ್‌ವೆಲ್ತ್ ಕ್ರೀಡಾ ಕೂಟದ ಪುರುಷರ 60 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತದ ರಿಷಿಕಾಂತ್ ಸಿಂಗ್ ಅವರು ಬೆಳ್ಳಿ ಪದಕ ಗೆದ್ದಿದ್ದಾರೆ.

ಕ್ಲೀನ್ ಅಂಡ್ ಜರ್ಕ್ ವಿಭಾಗದ ಎರಡು ಪ್ರಯತ್ನಗಳು ವಿಫಲವಾದದ್ದು ಭಾರತದ ರಿಷಿಕಾಂತ್ ಸಿಂಗ್ ಅವರಿಗೆ ದುಬಾರಿಯಾಗಿ ಪರಿಣಮಿಸಿತು. ಅಂತಿಮವಾಗಿ 264 ಕೆ.ಜಿ.ಯೊಂದಿಗೆ (121 ಕೆ.ಜಿ+ 143 ಕೆ.ಜಿ) ಬೆಳ್ಳಿ ಪದಕ ಗೆಲ್ಲುವಲ್ಲಿ ಮಣಿಪುರದ ವೇಟ್ ಲಿಫ್ಟರ್ ಯಶಸ್ವಿಯಾದರು.

ಒಟ್ಟು ಪ್ರಯತ್ನಗಳಲ್ಲಿ 273 ಕೆ.ಜಿ. ಎತ್ತುವ ಮೂಲಕ ಮಲೇಷ್ಯಾದ ಮೊಹಮದ್ ಅನಿಕ್ ಕಸ್ದನ್ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಕೀನ್ಯಾದ ಅಮುಂಗಾ ಎಂಬೊಯಾ ಕಂಚಿನ ಪದಕ ಗೆದ್ದರು.

ಗ್ಲಾಸ್ಗೊ ಕಾಮನ್‌ವೆಲ್ತ್ ಕ್ರೀಡಾ ಕೂಟದ ದೈಹಿಕವಾಗಿ ಸಮರ್ಥರಿರುವ ಸ್ಪರ್ಧೆಗಳಲ್ಲಿ ಇದು ಮೊದಲ ಪದಕವಾಗಿದೆ. ಪುರುಷರ ಹೆವಿವೇಯ್ಟ್ ಪ್ಯಾರಾ ಪವರ್‌ಲಿಫ್ಟಿಂಗ್‌ನಲ್ಲಿ ಝುಂಡು ಕುಮಾರ್ ಕಂಚಿನ ಪದಕ ಗೆದ್ದಿದ್ದರು.

# ನೀಟ್ ಬೆನ್ನಲ್ಲೇ ಪಂಜಾಬ್‌ನಲ್ಲೂ ಭುಗಿಲೆದ್ದ ಪ್ರಶ್ನೆ ಪತ್ರಿಕೆ ಸೋರಿಕೆ ವಿವಾದ

• ಪ್ರಜೋದಯ ವರದಿ

**ಚಂಡೀಗಢ:** ನೀಟ್ ಅಕ್ರಮದ ಬೆನ್ನಲ್ಲೇ ಆಮ್ ಆದ್ಮಿ ಪಕ್ಷ (ಎಎಪಿ) ಅಧಿಕಾರದಲ್ಲಿರುವ ಪಂಜಾಬ್‌ನಲ್ಲೂ ಪ್ರಶ್ನೆ ಪತ್ರಿಕೆ ಸೋರಿಕೆ ವಿವಾದ ಭುಗಿಲೆದ್ದಿದೆ. ಈ ಕುರಿತು ಸ್ಪಷ್ಟನೆ ನೀಡಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ಎಎಪಿ ಅಧಿಕಾರಕ್ಕೆ ಬಂದ ಬಳಿಕ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಒಂದೇ ಒಂದು ಪ್ರಶ್ನೆ ಪತ್ರಿಕೆಯೂ ಸೋರಿಕೆ ಯಾಗಿಲ್ಲ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಹಲವು ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ ಎಂದು ಆರೋಪಿಸಿ ವಿರೋಧ ಪಕ್ಷಗಳು ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿವೆ. ಪಂಜಾಬ್ ಶಿಕ್ಷಣ ಸಚಿವರ ರಾಜೀನಾಮೆಗೆ ಬಿಜೆಪಿ ಒತ್ತಾಯಿಸಿದೆ.


ಇತ್ತೀಚೆಗೆ ನಡೆದ ಫಾರ್ಮಸಿ ಆಫೀಸರ್ ಪರೀಕ್ಷೆಯ ಒಂದೇ ಒಂದು ಪ್ರಕರಣ ಬೆಳಕಿಗೆ ಬಂದಿತ್ತು. ಈ ಅಂತರರಾಜ್ಯ ನಕಲಿ ದಂಧೆಯನ್ನು ಪಂಜಾಬ್ ಪೊಲೀಸರು ಮಟ್ಟಹಾಕಿದ್ದಾರೆಂದು ಮಾನ್ ತಿಳಿಸಿದ್ದಾರೆ.

ನಾವು ಅಧಿಕಾರಕ್ಕೆ ಬಂದು ಕಳೆದ ನಾಲ್ಕೂವರೆ ವರ್ಷಗಳಾಗಿವೆ. ಪಂಜಾಬ್‌ನಲ್ಲಿ ಇದುವರೆಗೆ ಒಂದೇ ಒಂದು ಪ್ರಶ್ನೆ ಪತ್ರಿಕೆಯೂ ಸೋರಿಕೆಯಾಗಿಲ್ಲ ಎಂದು ಪುನರುಚ್ಚರಿಸಿದ್ದಾರೆ. ರಾಜ್ಯದಲ್ಲಿ ಅರ್ಹತೆಯ ಆಧಾರದಲ್ಲಿ 68,585 ಸರ್ಕಾರಿ ಹುದ್ದೆಗಳನ್ನು ನೀಡಲಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

# ಬಿಪಿಎಲ್ ಕಾರ್ಡ್ ಪಡೆಯಲು ವಾರ್ಷಿಕ ಆದಾಯದ ಮಿತಿ

## 3 ಲಕ್ಷ ರೂ.ಗೆ ಹೆಚ್ಚಿಸಲು ಕ್ರಮ | ಸಚಿವ ಕೆ.ಹೆಚ್.ಮುನಿಯಪ್ಪ

• ಪ್ರಜೋದಯ ವರದಿ






**ಬೆಂಗಳೂರು:** ಕಾರ್ಡ್ ಪಡೆಯಲು ವಾರ್ಷಿಕ ಆದಾಯದ ಮಿತಿಯನ್ನು 3 ಲಕ್ಷ ರೂ. ಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಭಾನುವಾರ ಹೇಳಿದ್ದಾರೆ.

ಗ್ಯಾರಂಟಿ ಯೋಜನೆಗಳ ಅನುಷ್ಠನಾ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ ಅವರ ನೇತೃತ್ವದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುನಿಯಪ್ಪ ಅವರು, ಕೇಂದ್ರ ಸರ್ಕಾರದ ಮಾನದಂಡಗಳ ಅನ್ವಯ ಪಡಿರ ಕಾಡ್‌ಗಳ ಪರಿಶೀಲನೆ ನಡೆಯುತ್ತಿದ್ದು, ಯಾವುದೇ ಕಾರ್ಡ್ ರದ್ದು ಪಡಿಸಲ್ಲ, ಅನರ್ಹ ಕಾರ್ಡ್ ಗಳನ್ನು ಎಪಿಎಲ್‌ಗೆ ವರ್ಗಾಯಿಸಲಾಗುತ್ತಿದೆ ಎಂದರು.

ಬಿಪಿಎಲ್ ಕಾರ್ಡ್ ಪಡೆಯಲು ನಿಗದಿಪಡಿಸಿದ 1 ಲಕ್ಷ 20 ಸಾವಿರ ವಾರ್ಷಿಕ ಆದಾಯದ ಮಿತಿಯನ್ನು ಆಡಳಿತಾತ್ಮಕ ಸುಧಾರಣೆ ಆಯೋಗದ ಶಿಫಾರಸ್ಸಿನಂತೆ 3 ಲಕ್ಷ ರೂ.ಗೆ ಹೆಚ್ಚಿಸಲು ಕ್ರಮ ವಹಿಸಲಾಗುತ್ತಿದೆಂದು ತಿಳಿಸಿದರು.

ಆಹಾರ ಇಲಾಖೆಯು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಅನ್ನಭಾಗ್ಯ ಯೋಜನೆಯ ಮೂಲಕ ರಾಜ್ಯದಲ್ಲಿ ಸುಮಾರು 4.42 ಕೋಟಿ ಫಲಾನುಭವಿಗಳಿಗೆ 10 ಕೆಜಿ ಪಡಿತರ ವಿತರಣೆ ಮಾಡುತ್ತಿದ್ದೇವೆ. ಪಡಿತರ ವಿತರಣೆಯಲ್ಲಿ ಕಾಳಸಂತೆಯನ್ನು ತಡೆಯಲು ಗೋದಾಮುಗಳಿಗೆ ಸಿಸಿ ಕ್ಯಾಮರಾ ಹಾಗೂ ಪಡಿತರ ವಾಹನಗಳಿಗೆ ಜಿಪಿಎಸ್ ನಿಗಾ ವಹಿಸಲಾಗುತ್ತಿದೆ. ಕಾಳಸಂತೆಗೆ ಮಾರಾಟವಾಗುವ ಪಡಿತರ ಅಕ್ರಮ ತಡೆಯಲು ಸುಮಾರು 1,497 ಪ್ರಕರಣಗಳನ್ನು ದಾಖಲಿಸಿದ್ದು 50 ಕೋಟಿ ರೂ.ಗಳ ಪಡಿತರ ವಶಪಡಿಸಿಕೊಂಡಿದ್ದೇವೆಂದು ತಿಳಿಸಿದರು.

ಎಂಎಸ್ ಪಿ ಯೋಜನೆಯಡಿ (5.60 ) ಐದು ಲಕ್ಷದ 60 ಸಾವಿರ ಲ್ಯಾಕ್ ಮೆಟ್ರಿಕ್ ಟನ್ ರಾಗಿಯನ್ನು ಖರೀದಿಸಿದ್ದು ಅದನ್ನು ಶುದ್ದೀಕರಿಸಿ ಗ್ರಾಹಕರಿಗೆ ವಿತರಣೆ ಮಾಡಲಾಗುತ್ತಿದೆ. ಇಂದಿರಾ ಕಿಟ್ ನೀಡಲು ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಮುಂದಿನ ಎರಡು ತಿಂಗಳಲ್ಲಿ ಕಿಟ್ ವಿತರಣೆಗೆ ಕಾರ್ಯರೂಪಿಸುತ್ತಿದ್ದೇವೆ. ಅದಕ್ಕೆ ಸುಮಾರು 6,000 ಕೋಟಿ ರೂ. ಗಳು ವೆಚ್ಚ ವಾಗಲಿದ್ದು ಬಹಳ ಸೂಕ್ಷ್ಮವಾಗಿ ನಡೆಸಬೇಕಾಗುತ್ತಿರುವುದರಿಂದ ಸ್ವಲ್ಪ ವಿಲಂಭವಾಗುತ್ತಿದೆ ಆದಷ್ಟು ಬೇಗ ಈ ಪ್ರಕ್ರಿಯೆಯು ಅಂತಿಮವಾಗಲಿದೆ ಎಂದರು.

## 14 ಲಕ್ಷ ಅನರ್ಹರ ಬಿಪಿಎಲ್ ಕಾರ್ಡ್ ರದ್ದು



ರಾಜ್ಯದಾದ್ಯಂತ ಇರುವ 20,259 ನ್ಯಾಯಬೆಲೆ ಅಂಗಡಿಗಳಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಹಾಗೂ ಸಚಿವರು ಗ್ಯಾರಂಟಿ ಯೋಜನೆಯ ಅಧ್ಯಕ್ಷರ ಭಾವಚಿತ್ರ, ಹಾಗೂ ಅವರ ದೂರವಾಣಿ ಸಂಖ್ಯೆಯನ್ನು ಅಳವಡಿಸಲು ಚರ್ಚಿಸಲಾಯಿತು. ನ್ಯಾಯಬೆಲೆ ಅಂಗಡಿಗಳನ್ನು ಬೆಳಿಗ್ಗೆ 6 ರಿಂದ ರಾತ್ರಿ 10 ರವರೆಗೂ ತರೆದು ಪಡಿತರ ವಿತರಿಸಲು ಸೂಚಿಸಲಾಗಿದ್ದು ತಪ್ಪಿದ್ದಲ್ಲಿ ಇಲಾಖೆಯ ಸಹಾಯವಾಣಿ ಸಂಖ್ಯೆ 1967 ಸಹಾಯ ವಾಣಿಗೆ ಕರೆಮಾಡಿ ದೂರು ನೀಡಬಹುದಾಗಿದೆ. ಬೆಂಗಳೂರು ನಗರದಲ್ಲಿನ ನ್ಯಾಯಬೆಲೆ ಅಂಗಡಿಗಳು ಹಾಗೂ ಅಧಿಕಾರಿಗಳ ಮೇಲೆ ಬಂದ ದೂರುಗಳ ಮೇಲೆ ತ್ವರಿತ ಕ್ರಮ ಕೈಗೊಳ್ಳಲು ಕಾರ್ಯದರ್ಶಿಗಳಿಗೆ ಸೂಚನೆ ನೀಡಿದರು.

# ಚಿನ್ನ ಗೆದ್ದ ಚಾನು



**ಗ್ಲಾಸ್ಗೊ:** ಕಾಮನ್‌ವೆಲ್ತ್ ಕ್ರೀಡಾ ಕೂಟದ ಮಹಿಳೆಯರ 48 ಕೆ.ಜಿ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತದ ಮೀರಾಬಾಯಿ ಚಾನು ಅವರು ಚಿನ್ನದ ಪದಕ ಪಡೆದುಕೊಂಡಿದ್ದಾರೆ.

31 ವರ್ಷದ ಮೀರಾಬಾಯಿ ಚಾನು ಅವರು ಕಾಮನ್‌ವೆಲ್ತ್ ಕ್ರೀಡಾ ಕೂಟಗಳಲ್ಲಿ ಸತತ ಮೂರನೇ ಬಾರಿಗೆ ಚಿನ್ನದ ಪದಕ ಗೆದ್ದಿದ್ದಾರೆ. ಇದು ಗ್ಲಾಸ್ಗೊ ಕ್ರೀಡಾಕೂಟದಲ್ಲಿ ಭಾರತದ ಮೊದಲ ಚಿನ್ನದ ಪದಕವಾಗಿದೆ.

ಸ್ನ್ಯಾಚ್ ವಿಭಾಗದಲ್ಲಿ 85 ಕೆ.ಜಿ ಮತ್ತು ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ 105 ಕೆ.ಜಿ ಸೇರಿ ಒಟ್ಟು 190 ಕೆ.ಜಿ ಅವರ ಅತ್ಯುತ್ತಮ ಸಾಧನೆಯಾಗಿತ್ತು. ಒಟ್ಟು 190 ಕೆ.ಜಿ ತೂಕವನ್ನು ಎತ್ತುವ ಮೂಲಕ ತಮ್ಮ ಪ್ರಾಬಲ್ಯ ಮೆರೆದರು.

ಬೆಳ್ಳಿ ಪದಕ ಗೆದ್ದ ನೈಜೀರಿಯಾದ ರೂತ್ ಅಸುಕ್ವೊ ನ್ಯಾಂಗ್ ಅವರು ಒಟ್ಟು 168 ಕೆ.ಜಿ ಎತ್ತಿದರು. ಇದು ಮೀರಾಬಾಯಿ ಅವರಿಗಿಂತ 22 ಕೆ.ಜಿ ಕಡಿಮೆಯಾಗಿದೆ.

ಕ್ಲೀನ್ ಅಂಡ್ ಜರ್ಕ್ ವಿಭಾಗದಲ್ಲಿ 105 ಕೆ.ಜಿ ಎತ್ತುವ ಮೂಲಕ ಮೀರಾಬಾಯಿ ಚಾನು ಅವರು ಕಾಮನ್‌ವೆಲ್ತ್ ಗೇಮ್ಸ್ ದಾಖಲೆಯನ್ನು ಮುರಿದರು.

# ಕಾರ್ಗಿಲ್ ವಿಜಯ್ ದಿವಸ್ ರಾಷ್ಟ್ರೀಯ ಹಬ್ಬವಾಗಲಿ



• ಪ್ರಜೋದಯ ವರದಿ

**ಹೊಳೆನರಸೀಪುರ:** ಭಾರತ-ಪಾಕಿಸ್ತಾನ ನಡುವೆ 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತ ಸಾಧಿಸಿದ ವಿಜಯದ ಸ್ಮರಣಾರ್ಥ ಆಚರಿಸುವ ಕಾರ್ಗಿಲ್ ವಿಜಯ್ ದಿವಸ್ ಅನ್ನು ರಾಷ್ಟ್ರೀಯ ಹಬ್ಬವಾಗಿ ಘೋಷಿಸಿ ತಾಲ್ಲೂಕು ಆಡಳಿತದ ಜೊತೆಗೆ ಪ್ರತಿ ಶಾಲಾ-ಕಾಲೇಜುಗಳಲ್ಲೂ ಆಚರಿಸಬೇಕೆಂದು ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಮಹಮದ್ ಕಾಲೀದ್ ಅವರು ಒತ್ತಾಯಿಸಿದರು.

ಪಟ್ಟಣದ ಸುಭಾಷ್ ವೃತ್ತದಲ್ಲಿ ನಿವೃತ್ತ ಸೈನಿಕರ ಸಂಘದಿಂದ ಭಾನುವಾರ ಆಯೋಜಿಸಿದ್ದ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದರು ಅವರು, ಕಾರ್ಗಿಲ್ ವಿಜಯ್ ದಿವಸ್ ಭಾರತೀಯರಿಗೆ ಹೆಮ್ಮೆಯ ದಿನವಾಗಿದೆ. ದೇಶದ ರಕ್ಷಣೆಗಾಗಿ ಹೋರಾಡಿ ವೀರ ಮರಣ ಹೊಂದಿದ ಯೋಧರನ್ನು ಸ್ಮರಿಸುವುದು, ಅವರಿಗೆ ಗೌರವ ಸಮರ್ಪಿಸುವುದು ಹಾಗು ಅವರ ಆತ್ಮಕ್ಕೆ ಶಾಂತಿ ಕೋರುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ಹೇಳಿದರು.

ಹುತಾತ್ಮ ಯೋಧರ ಕುಟುಂಬ ಸದಸ್ಯರಿಗೆ ನಿಮ್ಮೊಂದಿಗೆ ನಾವಿದ್ದೇವೆಂಬ ಭರವಸೆಯ ಸಂದೇಶ ನೀಡುವುದು ಸಮಾಜದ ಜವಾಬ್ದಾರಿ. ಯೋಧರಿಗೆ ಆತ್ಮಸ್ಥೈರ್ಯ ತುಂಬುವ ಜೊತೆಗೆ ಅಗತ್ಯ ಸಂದರ್ಭಗಳಲ್ಲಿ ಅವರ ಕುಟುಂಬಗಳ ನೆರವಿಗೆ ನಿಲ್ಲುತ್ತಿರುವ ದೇಶಾಭಿಮಾನಿಗಳ ಕಾರ್ಯ ಅಭಿನಂದನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಗಿಲ್ ಯುದ್ಧದ ವೀರಯೋಧರ ತ್ಯಾಗ, ಸಾಹಸ ಹಾಗೂ ದೇಶಪ್ರೇಮವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಕಾರ್ಗಿಲ್ ವಿಜಯ್ ದಿವಸ್ ಆಚರಣೆ ನಡೆಸುವುದು ಅಗತ್ಯವಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಹಾಗೂ ದೇಶಕ್ಕಾಗಿ ಸೇವೆ ಸಲ್ಲಿಸುವ ಮನೋಭಾವವನ್ನು ಬೆಳೆಸಲು ಸಾಧ್ಯವೆಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಸುಭಾಷ್ ವೃತ್ತದಲ್ಲಿ ವೀರ ಸೇನಾನಿ ಸುಭಾಷ್‌ಚಂದ್ರ ಬೋಸ್ ಅವರ ಪ್ರತಿಮೆ ಅನಾವರಣಗೊಳಿಸಲಾಯಿತು. ನಿವೃತ್ತ ಯೋಧರ ಸಂಘದ ಅಧ್ಯಕ್ಷ ಈಶ್ವರ್ ಅವರು ದೀಪ ಬೆಳಗಿಸಿ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಹುತಾತ್ಮ ಯೋಧರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.

ನಿವೃತ್ತ ಯೋಧ ಹೆಚ್.ಡಿ.ವಸಂತ ಕುಮಾರ್ ರಾಷ್ಟ್ರಗೀತೆ ಹಾಡಿ ಧ್ವಜವಂದನೆ ಸಲ್ಲಿಸಿದರು. ಜಾನಪದ ಕಲಾವಿದ ನಾಗರಾಜ್ ದೇಶಭಕ್ತಿ ಗೀತೆ ಹಾಡಿದರು.

ನಿವೃತ್ತ ಯೋಧರ ಸಂಘದ ಗೌರವಾಧ್ಯಕ್ಷ ಸುಭಾಷ್ ಬಾಬು, ನಿವೃತ್ತ ಸುಬೇದಾರ್ ಹೆಚ್.ಎನ್.ಚಂದ್ರಪ್ಪ, ನಿವೃತ್ತ ಯೋಧರಾದ ಮಂಜುನಾಥ್, ರವಿಕುಮಾರ್, ಮಹದೇವಯ್ಯ, ಚನ್ನಕೇಶವ, ಬಂಗಾರಿ, ಚನ್ನಬಸಪ್ಪ, ಶಿವಣ್ಣ, ರಾಜಯ್ಯ ಇತರರಿದ್ದರು.

# ಕುಷ್ಟ ರೋಗದ ಬಗ್ಗೆ ಭಯ ಬೇಡ

• ಪ್ರಜೋದಯ ವರದಿ



**ಜಾವಗಲ್:** ಕುಷ್ಟ ರೋಗ ಅಂಟು ರೋಗವಲ್ಲ, ರೋಗದ ಬಗ್ಗೆ ಭಯ ಪಡದೆ ಆರಂಭಿಕ ಹಂತದಲ್ಲೇ ಸೂಕ್ತ ಚಿಕಿತ್ಸೆ ಪಡೆದರೆ ಸಂಪೂರ್ಣ ಗುಣಮುಖರಾಗಬಹುದೆಂದು ಹಂದ್ರಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ|| ಕೆ.ಆರ್.ದೀಪಕ್ ಅವರು ತಿಳಿಸಿದರು.

ಜಾವಗಲ್ ಹೋಬಳಿಯ ಹಂದ್ರಾಳು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಗುಡ್ಡದ ಕೆಂಗನಹಳ್ಳಿ ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ ಕುಷ್ಟ ರೋಗ ಪತ್ತೆ ಹಚ್ಚುವ ಅಭಿಯಾನ ಹಾಗು ಸಮೀಕ್ಷೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಶಶಿಕಿರಣ್, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಲತಾ, ಆಶಾ ಕಾರ್ಯಕರ್ತೆಯರಾದ ಲೋಲಾಕ್ಷಮ್ಮ, ಕಮಲಮ್ಮ, ಪಾರ್ವತಮ್ಮ ಹಾಗು ಜ್ಯೋತಿ ಅವರು ಮನೆ-ಮನೆಗೆ ತೆರಳಿ ಚಾರ್ಟ್‌ಗಳ ಮೂಲಕ ಕುಷ್ಟ ರೋಗದ ಲಕ್ಷಣಗಳು, ಮುನ್ನೆಚ್ಚರಿಕೆ ಹಾಗು ಚಿಕಿತ್ಸೆಯ ಕುರಿತು ವಿವರಿಸಿದರು. ಬಳಿಕ ಕುಟುಂಬದ ಎಲ್ಲಾ ಸದಸ್ಯರನ್ನು ಪರಿಶೀಲಿಸಿ ರೋಗದ ಲಕ್ಷಣಗಳಿವೆಯೇ ಎಂಬುದನ್ನು ಸಮೀಕ್ಷೆ ಮೂಲಕ ದಾಖಲಿಸಿಕೊಂಡರು.

ಆರೋಗ್ಯ ಸಿಬ್ಬಂದಿ ನಡೆಸಿದ ಮನೆ-ಮನೆ ಸಮೀಕ್ಷೆಯ ವರದಿಯನ್ನು ಪರಿಶೀಲಿಸಿದ ಡಾ|| ಕೆ.ಆರ್. ದೀಪಕ್ ಅವರು, ಗುಡ್ಡದ ಕೆಂಗನಹಳ್ಳಿ ಗ್ರಾಮವನ್ನು ಕುಷ್ಟ ರೋಗ ಮುಕ್ತ ಗ್ರಾಮವೆಂದು ಘೋಷಿಸಿದರು.

ಕುಷ್ಟರೋಗದ ಆರಂಭಿಕ ಲಕ್ಷಣಗಳ ಕುರಿತು ಮಾಹಿತಿ ನೀಡಿದ ಡಾ|| ದೀಪಕ್, ತಾಮ್ರ ಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುವುದು ಹಾಗು ಆ ಭಾಗದಲ್ಲಿ ಸ್ಪರ್ಶಜ್ಞಾನ ಮತ್ತು ನೋವಿನ ಅನುಭವ ಇಲ್ಲದಿರುವುದು ಪ್ರಮುಖ ಲಕ್ಷಣಗಳಾಗಿವೆ ಎಂದು ಹೇಳಿದರು.

ಜೊತೆಗೆ ನರಗಳಲ್ಲಿ ಗಂಟು ಕಾಣಿಸಿಕೊಳ್ಳುವುದು, ಮುಖದ ಮೇಲೆ ನೋವಿಲ್ಲದ ಉಬ್ಬುಗಳು ಕಾಣಿಸಿಕೊಳ್ಳುವುದು, ನರಗಳು ಉಬ್ಬಿರುವಂತೆ ಕಂಡು ಬರುವುದು, ನರಗಳನ್ನು ಪರೀಕ್ಷಿಸಿದಾಗ ಕಣ್ಣು ರೆಪ್ಪೆ ಹಾಗೂ ಕಣ್ಣು ಮುಚ್ಚುವಲ್ಲಿ ತೊಂದರೆ ಉಂಟಾಗುವುದು, ಮೂಗಿನ ಮಧ್ಯಭಾಗ ಚಪ್ಪಟೆಯಾಗುವುದು, ಕೈ-ಕಾಲುಗಳು ಸೆಟೆದುಕೊಳ್ಳುವುದು ಮುಂತಾದ ಲಕ್ಷಣಗಳೂ ಕಂಡು ಬರಬಹುದೆಂದು ವಿವರಿಸಿದರು.

ಕುಷ್ಟ ರೋಗ ಬಂದರೆ ಗಾಬರಿ ಪಡುವ ಅಗತ್ಯವಿಲ್ಲ. ಇದು ಅಂಟು ರೋಗವಲ್ಲ. ಸೂಕ್ತ ಚಿಕಿತ್ಸೆಯಿಂದ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಕುಷ್ಟ ರೋಗಕ್ಕೆ ಉಚಿತ ಚಿಕಿತ್ಸೆ ಲಭ್ಯವಿದ್ದು, ವೈದ್ಯರ ಸಲಹೆಯಂತೆ ನಿಗದಿತ ಅವಧಿಗೆ, ಸಾಮಾನ್ಯವಾಗಿ ಆರು ತಿಂಗಳ ಕಾಲ, ಚಿಕಿತ್ಸೆಯನ್ನು ಕಡ್ಡಾಯವಾಗಿ ಪಡೆಯಬೇಕೆಂದರು.

# ಶಾಹೂ ಮಹಾರಾಜರ ಆಡಳಿತ ದೇಶಕ್ಕೆ ಮಾದರಿ

• ಪ್ರಜೋದಯ ವರದಿ




**ಹಾಸನ:** ಛತ್ರಪತಿ ಶಾಹೂ ಮಹಾರಾಜರು ಸಾಮಾಜಿಕ ನ್ಯಾಯ, ಸಮಾನತೆ ಹಾಗು ಜನಪರ ಆಡಳಿತದ ಮೂಲಕ ದೇಶಕ್ಕೆ ಮಾದರಿಯಾಗಿದ್ದಾರೆ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಸಂಯೋಜಕ ಗಂಗಾಧರ್ ಬಹುಜನ್ ಅವರು ಹೇಳಿದರು.

ಬಿಎಸ್‌ಪಿ ಜಿಲ್ಲಾ ಸಮಿತಿ ವತಿಯಿಂದ ನಗರದ ಸ್ವಾಭಿಮಾನ ಭವನದಲ್ಲಿ ನಡೆದ ಶಾಹೂ ಮಹಾರಾಜ್ ಅವರ ಜಯಂತಿ ಉದ್ಘಾಟಿಸಿ ಮಾತನಾಡಿ, ಇಂದಿನ ಸರ್ಕಾರಗಳು ಶಾಹೂ ಮಹಾರಾಜರ ಆಡಳಿತ ಪರಿಕಲ್ಪನೆಯನ್ನು ಅಳವಡಿಸಿಕೊಂಡು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಸಮಾನ ಅವಕಾಶ ಕಲ್ಪಿಸುವ ನೀತಿಗಳನ್ನು ಜಾರಿಗೆ ತರಬೇಕು. ಶಾಹೂ ಮಹಾ ರಾಜರು ಶಿಕ್ಷಣ, ಉದ್ಯೋಗ ಮತ್ತು ಆಡಳಿತದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯಕ್ಕೆ ಭದ್ರ ಬುನಾದಿ ಹಾಕಿದರು. ಬಡವರು, ದಲಿತರು, ಹಿಂದುಳಿದವರು ಹಾಗು ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅವರು ಜಾರಿಗೆ ತಂದ ಜನಪರ ಯೋಜನೆಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಆಡಳಿತ ಮಾದರಿ ಪ್ರತಿಯೊಂದು ಸರ್ಕಾರಕ್ಕೂ ಆದರ್ಶವಾಗಿದೆ. ಸಂವಿಧಾನ ಜಾರಿಯಾಗುವುದಕ್ಕೂ ಮುನ್ನವೇ ತಮ್ಮ ಸಂಸ್ಥಾನ ದಲ್ಲಿ ಹಿಂದುಳಿದ ವರ್ಗಗಳಿಗೆ ಶೇ.50ರಷ್ಟು ಮೀಸಲಾತಿ ಜಾರಿಗೊಳಿಸುವ ಮೂಲಕ ಸಾಮಾಜಿಕ ಸಮಾನತೆಯ ಹೊಸ ಅಧ್ಯಾಯ ಆರಂಭಿಸಿದ್ದ ರೆಂದರು.

ಅವರ ದೂರದೃಷ್ಟಿಯ ಆಡಳಿತವು ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ರಚನೆಗೂ ಪ್ರೇರಣೆಯಾಯಿತು. ಜ್ಯೋತಿರಾವ್ ಫುಲೆ, ಸಾವಿತ್ರಿ ಬಾಯಿ ಫುಲೆ, ರಾಜರ್ಷಿ ಛತ್ರಪತಿ ಶಾಹೂ ಮಹಾರಾಜ್, ಡಾ.ಬಿ.ಆರ್. ಅಂಬೇಡ್ಕರ್ ಹಾಗು ಕಾನ್ಶಿರಾಮ್ ಅವರ ವಿಚಾರಧಾರೆ ಗಳನ್ನು ಪ್ರತಿಯೊಬ್ಬರೂ ಅಳವಡಿಸಿ ಕೊಳ್ಳಬೇಕು. ಸಾಮಾಜಿಕ ನ್ಯಾಯ, ಶಿಕ್ಷಣ, ಸಮಾನ ಅವಕಾಶ ಮತ್ತು ರಾಜಕೀಯ ಅಧಿಕಾರದ ಮೂಲಕವೇ ಬಹುಜನ ಸಮಾಜದ ಸಬಲೀಕರಣ ಸಾಧ್ಯ ಎಂದು ಹೇಳಿದರು.

ಬಿಎಸ್‌ಪಿ ಜಿಲ್ಲಾಧ್ಯಕ್ಷ ಲಕ್ಷಣ್ ಕೀರ್ತಿ, ಉಪಾಧ್ಯಕ್ಷ ಶಾಕೀರ್ ಅಹಮ್ಮದ್, ಪ್ರಧಾನ ಕಾರ್ಯದರ್ಶಿ ಸಿ.ಜಿ.ಸೋಮಶೇಖರ್, ಖಜಾಂಚಿ ಎಂ.ಎಸ್.ನಾಗರಾಜ್, ಜಿಲ್ಲಾ ಕಾರ್ಯದರ್ಶಿಗಳಾದ ಕಿರಣ್ ಕುಮಾರ್, ರಾಜು ಬೆಳ್ಳೊಟ್ಟೆ, ಸಿದ್ದಲಿಂಗಯ್ಯ, ಮನುಕುಮಾರ, ಕಾರ್ಯಕಾರಿ ಸಮಿತಿ ಸದಸ್ಯ ಜಯವರ್ಧನ್, ಯಶೋಧಮ್ಮ, ವಕೀಲ ರಾಜೇಶ್ ಸಾಣೇನಹಳ್ಳಿ, ತಾಲ್ಲೂಕು ಘಟಕಗಳ ಅಧ್ಯಕ್ಷರಾದ ಪ್ರಕಾಶ್ ಕೆಸಗೋಡು, ರಾಜು ಕುಂದೂರು, ವೀರೇಶ್ ಕಲ್ಗಣೆ, ಶಿವಶೇಖರ, ಡಿ.ವಿ.ಯೋಗೀಶ್, ಉಮೇಶ್ ಮತ್ತಿತರರಿದ್ದರು.

# ಭಾರತದ ಭೂಪ್ರದೇಶಗಳನ್ನು ಒಳಗೊಂಡ ನಕ್ಷೆಯನ್ನು ನಾಣ್ಯದಿಂದ ತೆಗೆಯಲ್ಲ ಎಂದ ನೇಪಾಳ



**ಕಠ್ಮಂಡು:** ಒಂದು ರೂಪಾಯಿ (ನೇಪಾಳೀಸ್ ರುಪೀ) ನಾಣ್ಯದ ಮೇಲೆ ಇರುವ ದೇಶದ ನಕ್ಷೆಯ ಚಿತ್ರವನ್ನು ಹಾಗೆಯೇ ಉಳಿಸಿಕೊಳ್ಳಲಾಗುವುದೆಂದು ನೇಪಾಳದ ರಾಷ್ಟ್ರೀಯ ಬ್ಯಾಂಕ್ ತಿಳಿಸಿದೆ. ಭಾರತದ ಲಿಂಪಿಯಾಧುರ, ಲಿಪುಲೇಖ್ ಮತ್ತು ಕಾಲಪಾನಿ ಪ್ರದೇಶಗಳನ್ನು ಒಳಗೊಂಡ ನೇಪಾಳದ ನಕ್ಷೆ ಸದ್ಯ ಆ ದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯದ ಮೇಲಿದೆ.

ಈ ಪ್ರದೇಶಗಳು ತನಗೆ ಸೇರಿದ್ದು ಎಂದು ನೇಪಾಳ ಹೇಳಿಕೊಂಡಿದೆ. ಆದರೆ, ಇವು ಉತ್ತರಾ ಖಂಡದ ಅವಿಭಾಜ್ಯ ಅಂಗ ಎಂದು ಭಾರತ ಪ್ರತಿಪಾದಿಸಿದೆ. ಹಾಗೆಯೇ, ಈ ವಿಚಾರವನ್ನು ದ್ವಿಪಕ್ಷೀಯ ಮಾತುಕತೆ ಮೂಲಕ ಇತ್ಯರ್ಥಪಡಿಸಬೇಕೆಂದು ಹೇಳಿದೆ.

# ಚೀನಾದಲ್ಲಿ ಚಂಡಮಾರುತ: ರೈಲು, ವಿಮಾನ ಸಂಚಾರ ರದ್ದು

• ಪ್ರಜೋದಯ ವರದಿ


**ಬೀಜಿಂಗ್:** ಚೀನಾದ ದಕ್ಷಿಣ ಭಾಗಕ್ಕೆ ನೌಲ್ ಚಂಡಮಾರುತ ಅಪ್ಪಳಿಸುತ್ತಿದ್ದು, ರೈಲು ಸೇವೆ ಸ್ಥಗಿತಗೊಂಡಿದೆ. ವಾಣಿಜ್ಯ ನಗರಿ ಹಾಂಗ್‌ಕಾಂಗ್‌ನಲ್ಲಿ ವಿಮಾನಗಳ ಸಂಚಾರ ರದ್ದಾಗಿದೆ.

ಹಾಂಗ್‌ಕಾಂಗ್‌ನಿಂದ ಗುವಾಂಗ್ ಡಾಂಗ್ ಪ್ರಾಂತ್ಯದವರೆಗಿನ ಕರಾವಳಿಗೆ ಚಂಡಮಾರುತ ಭಾನುವಾರ ಅಪ್ಪಳಿಸಲಿದೆ. ನೆಲಕ್ಕೆ ಅಪ್ಪಳಿಸುವ ವೇಳೆ, ಚಂಡಮಾರುತದ ವೇಗ ಗಂಟೆಗೆ 126ರಿಂದ 151 ಕಿ.ಮೀ.ನಷ್ಟು ಇರಲಿದೆ ಎಂದು ಚೀನಾದ ರಾಷ್ಟ್ರೀಯ ಹವಾಮಾನ ಕೇಂದ್ರ ತಿಳಿಸಿದೆ. ಈಗಾಗಲೇ 20 ಸಾವಿರ ಜನರನ್ನು ಸ್ಥಳಾಂತರ ಮಾಡಲಾಗಿದೆ ಎಂದು ಹೇಳಿದೆ.

ಶನಿವಾರ ಮತ್ತು ಭಾನುವಾರ ಹಾಂಗ್‌ಕಾಂಗ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಎಲ್ಲಾ ವಿಮಾನಗಳ ಹಾರಾಟ ರದ್ದು ಮಾಡಲಾಗಿತ್ತು ಎಂದು ಕ್ಯಾಥೆ ಪೆಸಿಫಿಕ್ ವಿಮಾನಯಾನ ಸಂಸ್ಥೆ ತಿಳಿಸಿದೆ.

# ಸಾಮಾಜಿಕ ಜಾಲತಾಣಗಳ ಬಳಕೆ ಕುರಿತು ಜಾಗೃತಿ ಅಗತ್ಯ

• ಪ್ರಜೋದಯ ವರದಿ



**ಅರಕಲಗೂಡು:** ವಿದ್ಯಾರ್ಥಿಗಳ ಪೋಷಕರು ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಅತಿಯಾಗಿ ತೊಡಗಿಕೊಳ್ಳುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ ಎಂದು ನಿವೃತ್ತ ಪ್ರಾಂಶುಪಾಲರಾದ ಅನುಸೂಯ ಅವರು ತಿಳಿಸಿದ್ದಾರೆ.

ಪಟ್ಟಣದ ಕೆಎನ್‌ವಿ ಕನ್ವೆನ್ಷನ್ ಹಾಲ್‌ನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳು ಜನಜೀವನದ ಅವಿಭಾಜ್ಯ ಭಾಗವಾಗಿವೆ. ದೇಶದಲ್ಲಿ ಮೊಬೈಲ್ ಬಳಕೆದಾರರ ಸಂಖ್ಯೆ ಶೇ.90ಕ್ಕೂ ಅಧಿಕವಾಗಿದ್ದು, ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಮೊಬೈಲ್ ಬಳಕೆ ಮಾಡುತ್ತಿದ್ದಾರೆ. ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಯುವತಿಯರ ಸಂಖ್ಯೆಯೂ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಕುರಿತು ಜಾಗೃತಿ ಅಗತ್ಯವೆಂದರು.

ಮಕ್ಕಳ ಪೋಷಕರು ತಮ್ಮ ಮಕ್ಕಳ ಚಲನವಲನಗಳ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ಇತ್ತೀಚಿನ ದಿನಗಳಲ್ಲಿ ಅಪ್ರಾಪ್ತ ಬಾಲಕಿಯರ ಮೇಲಿನ ದೌರ್ಜನ್ಯ ಹಾಗೂ ಮಹಿಳೆಯರ ಮೇಲಿನ ದಬ್ಬಾಳಿಕೆ ಪ್ರಕರಣಗಳು ಸಮಾಜದಲ್ಲಿ ಮುಂದುವರಿಯುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಇಂತಹ ಘಟನೆಗಳು ನಡೆಯುತ್ತಿರುವುದು ತಲೆತಗ್ಗಿಸುವ ವಿಚಾರವಾಗಿದೆ. ಕುಟುಂಬ ನಿರ್ವಹಣೆಯಲ್ಲಿ ಹೆಣ್ಣು ಮತ್ತು ಗಂಡು ಇಬ್ಬರಿಗೂ ಸಮಾನವಾದ ಜವಾಬ್ದಾರಿಯಿದ್ದು, ಪರಸ್ಪರ ಗೌರವ, ಸಹಕಾರ ಮತ್ತು ಜಾಗೃತಿಯಿಂದ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಸ್ಥಾಪಕರಾದ ಡಾ.ಡಿ. ವೀರೇಂದ್ರ ಹೆಗ್ಗಡೆ ಹಾಗೂ ಶ್ರೀಮತಿ ಹೇಮಾವತಿ ಹೆಗ್ಗಡೆಯವರ ಸಾಮಾಜಿಕ ಕಳಕಳಿ ಮತ್ತು ಚಿಂತನೆಯ ಫಲವಾಗಿ ಮಹಿಳಾ ಸಬಲೀಕರಣಕ್ಕೆ ಉತ್ತೇಜನ ನೀಡುವ ಹಲವು ಯೋಜನೆಗಳು ಅನುಷ್ಠಾನ ಗೊಂಡಿವೆ. ಸರ್ಕಾರದ ಯೋಜನೆಗಳಿಗೆ ಪೂರಕವಾಗಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಸಂಸ್ಥೆ ನೀಡುತ್ತಿರುವ ಕೊಡುಗೆ ಶ್ಲಾಘನೀಯವೆಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಡಗು ಜಿಲ್ಲಾ ನಿರ್ದೇಶಕ ವಿಠ್ಠಲ್ ಸಾಲಿಯಾನ್ ಅವರು ಮಾತನಾಡಿ, ಕಳೆದ ಮೂರು ದಶಕಗಳಿಂದ ಸಂಸ್ಥೆಯು ಮಹಿಳಾ ಸಬಲೀ ಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಅದರ ಪರಿಣಾಮವಾಗಿ ಲಕ್ಷಾಂತರ ಮಹಿಳೆಯರು ಆರ್ಥಿಕ ನೆರವು ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಮಹಿಳೆಯರನ್ನು ಆರ್ಥಿಕವಾಗಿ ಸದೃಢಗೊಳಿಸುವಲ್ಲಿ ಸಂಸ್ಥೆಯ ಯೋಜನೆಗಳು ಮಹತ್ವದ ಪಾತ್ರ ವಹಿಸುತ್ತಿವೆ ಎಂದರು.

ತಾಲ್ಲೂಕು ಮಟ್ಟದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮವು ಮಹಿಳೆಯರಲ್ಲಿ ಜ್ಞಾನ, ಜಾಗೃತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಮಹತ್ವದ್ದಾಗಿದೆ. ಸಂಸ್ಥೆಯ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗ್ರಾಮಗಳಿಗೆ ತೆರಳಿ ದೇವಸ್ಥಾನಗಳಿಗೆ ನೆರವು, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಸೇರಿ ಹಲವು ಜನಪರ ಕಾರ್ಯಕ್ರಮ ಗಳ ಅನುಷ್ಠಾನಕ್ಕೆ ಸಹಕರಿಸುತ್ತಿದ್ದಾರೆ. ಮಹಿಳೆಯರು ಈ ಅವಕಾಶಗಳನ್ನು ಸದುಪಯೋಗಪಡಿಸಿ ಕೊಂಡು ಸ್ವಾವಲಂಬಿಗಳಾಗಿ ಬದುಕಬೇಕೆಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಬ್ಯೂಟಿಷಿಯನ್ ತರಬೇತಿ ಪಡೆದ 20 ಮಂದಿ ಮಹಿಳೆಯರಿಗೆ ಪ್ರಮಾಣಪತ್ರ ವಿತರಣೆ ಹಾಗೂ ತರಬೇತಿ ನೀಡಿದ ಪ್ರಿಯಾ ಪಾರ್ಲರ್‌ನ ಆಶಾ ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಹೊನ್ನವಳ್ಳಿ ಸತೀಶ್, ವಿಸ್ಮಯ ಪಿ.ಶಿವಕುಮಾರ್, ಸಂಸ್ಥೆಯ ಯೋಜನಾಧಿಕಾರಿ ಬಾಬು, ಸಂಧ್ಯಾ, ಶಶಿಕುಮಾರ್, ನಂಜುಂಡಸ್ವಾಮಿ, ಮಲ್ಲೇಶಪ್ಪ ಉಪಸ್ಥಿತರಿದ್ದರು.

# ವಿಜೃಂಭಣೆಯ ಮಹಾಲಿಂಗೇಶ್ವರ ಸ್ವಾಮಿ ಉತ್ಸವ

• ಪ್ರಜೋದಯ ವರದಿ



**ನುಗ್ಗೇಹಳ್ಳಿ:** ಐತಿಹಾಸಿಕ ಕ್ಷೇತ್ರ ಯಾಚನಘಟ್ಟ ಗ್ರಾಮದ ಶ್ರೀ ಮಹಾಲಿಂಗೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಭಾನುವಾರ ರುದ್ರಾಭಿಷೇಕ, ಹೋಮ, ವಿಶೇಷ ಹೂವಿನ ಅಲಂ ಕಾರ ಸೇರಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ಶ್ರದ್ಧಾ ಭಕ್ತಿಯಿಂದ ನೆರವೇರಿದವು.

ಶ್ರೀ ಮಹಾಲಿಂಗೇಶ್ವರ ಸ್ವಾಮಿಯವರ ಮೆರೆದೇವರ ಪ್ರಭಾವಳಿ ಸಮರ್ಪಣೆ ಪ್ರಯುಕ್ತ ಮೂಲ ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಮಳೆಗಾಗಿ ಪ್ರಾರ್ಥಿಸಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಶನಿವಾರ ರಾತ್ರಿ ಮಂಗಳವಾದ್ಯಗಳ ವೈಭವದೊಂದಿಗೆ ಗ್ರಾಮದ ರಾಜ ಬೀದಿಗಳಲ್ಲಿ ವಿವಿಧ ದೇವರುಗಳ ಉತ್ಸವ ನಡೆಯಿತು. ವಿಘ್ನಸಂತೆಯ ಬೆಳ್ಳಿ ರುದ್ರ ಶಿವಪ್ರಸಾದ್ ಹಾಗು ಸಂಗಡಿಗರ ವೀರಭದ್ರನ ಕುಣಿತ ಉತ್ಸವಕ್ಕೆ ವಿಶೇಷ ಮೆರುಗು ನೀಡಿತು.

ಶ್ರೀ ಬಸವೇಶ್ವರ ಸ್ವಾಮಿ, ಮಳ್ಳವ್ವ ಹಾಗು ಶ್ರೀ ಮಸಿಯಮ್ಮ ದೇವಿಯ ಉತ್ಸವವು ವಿದ್ಯುತ್ ದೀಪಾಲಂಕಾರದ ನಡುವೆ ಅದ್ದೂರಿಯಾಗಿ ಜರುಗಿತು. ಭಕ್ತಾದಿಗಳಿಗೆ ಬೆಂಗಳೂರು ಮಹಾಲಿಂಗೇಶ್ವರ ಸ್ವಾಮಿ ಸೇವಾ ಸಮಿತಿ ವತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಗ್ರಾಮದ ಮುಖಂಡರು, ದೇವಾಲಯದ ಸೇವಾ ಸಮಿತಿ ಸದಸ್ಯರು, ಭಕ್ತರು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ವಿಶೇಷ ಪೂಜೆ, ಉತ್ಸವ ಮತ್ತು ಅನ್ನ ಸಂತರ್ಪಣೆಯ ಮೂಲಕ ಯಾಚನಘಟ್ಟದಲ್ಲಿ ಧಾರ್ಮಿಕ ವಾತಾವರಣ ನಿರ್ಮಾಣವಾಗಿತ್ತು.

# ಯುವಕರು ಸಮಾಜ ಸೇವೆಗೆ ಮುಂದಾಗಬೇಕು

• ಪ್ರಜೋದಯ ವರದಿ



**ಬೇಲೂರು:** ವಿಶ್ವ ಹಿಂದೂಪರಿಷತ್ ಬಜರಂಗದಳದ ವತಿಯಿಂದ ತಾಲ್ಲೂಕಿನ ಗೆಂಡೇಹಳ್ಳಿ ರಸ್ತೆಯ ಹನುಮಂತನಗರದಲ್ಲಿರುವ ಭೂತಪ್ಪನ ಗುಡಿ ಆವರಣದಲ್ಲಿ ಶ್ರಮದಾನ ಹಾಗೂ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸಂಘಟನೆಯ ಕಾರ್ಯಕರ್ತರು ಹುಲ್ಲು-ಗಿಡಗಂಟಿಗಳನ್ನು ತೆರವುಗೊಳಿಸಿ ಪರಿಸರವನ್ನು ಸ್ವಚ್ಛಗೊಳಿಸಿದರು.

ವಿಶ್ವ ಹಿಂದೂ ಪರಿಷತ್ ತಾಲ್ಲೂಕು ಅಧ್ಯಕ್ಷ ಭರತ್ ಬಿರಡಹಳ್ಳಿ ಅವರು ಮಾತನಾಡಿ, ಸಮಾಜ ಸೇವೆ ಹಾಗೂ ಪರಿಸರ ಸಂರಕ್ಷಣೆಯಂತಹ ಕಾರ್ಯಗಳಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದರು.

ಭೂತಪ್ಪನ ಗುಡಿ ಸುತ್ತಮುತ್ತ ಬೆಳೆದಿದ್ದ ಹುಲ್ಲು ಹಾಗೂ ಕಸವನ್ನು ಕಾರ್ಯಕರ್ತರು ಸ್ವಯಂಪ್ರೇರಿತವಾಗಿ ತೆರವುಗೊಳಿಸಿದ್ದು, ಇಂತಹ ಸೇವಾ ಕಾರ್ಯಗಳನ್ನು ಮುಂದಿನ ದಿನಗಳ ಲ್ಲಿಯೂ ನಿರಂತರವಾಗಿ ನಡೆಸುವ ಉದ್ದೇಶ ಹೊಂದಿದ್ದೇವೆ. ಸಮಾಜದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕೈಜೋಡಿಸಿದರೆ ಇನ್ನಷ್ಟು ಉತ್ತಮ ಸಮಾಜಮುಖಿ ಕಾರ್ಯಕ್ರಮ ಹಮ್ಮಿ ಕೊಳ್ಳಲು ಸಂಘಟನೆಗೆ ಪ್ರೇರಣೆಯಾಗುತ್ತದೆಂದು ತಿಳಿಸಿದರು.

ಧಾರ್ಮಿಕ ಸ್ಥಳಗಳಿಗೆ ಬರುವ ಭಕ್ತರು ಹಾಗೂ ಸಾರ್ವಜನಿಕರು ಪೂಜೆ ಅಥವಾ ಸೇವೆಯ ಬಳಿಕ ಪ್ಲಾಸ್ಟಿಕ್, ಕಸ-ಕಡ್ಡಿ ಸೇರಿ ತ್ಯಾಜ್ಯ ವಸ್ತುಗಳನ್ನು ಅಲ್ಲಿಯೇ ಬಿಸಾಡದೆ ತಮ್ಮೊಂದಿಗೆ ತೆಗೆದು ಕೊಂಡು ಹೋಗಿ ಸೂಕ್ತ ಡಸ್ಟ್‌ಬಿನ್‌ಗಳಲ್ಲಿ ಹಾಕುವ ಮೂಲಕ ಸ್ವಚ್ಛತೆ ಕಾಪಾಡಬೇಕೆಂದು ಮನವಿ ಮಾಡಿದರು.

ನಮ್ಮ ಜವಾಬ್ದಾರಿ ನಮ್ಮದೇ ಎಂಬ ಮನೋಭಾವದಿಂದ ಪ್ರತಿಯೊಬ್ಬರೂ ತಮ್ಮ ಕರ್ತವ್ಯ ವನ್ನು ನಿರ್ವಹಿಸಿದರೆ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಉಳಿಸಿಕೊಡಬಹುದೆಂದು ಹೇಳಿದರು.

ವಿಶ್ವ ಹಿಂದೂ ಪರಿಷತ್ ಬಜರಂಗದಳದ ಕಾರ್ಯದರ್ಶಿ ನಾಗೇಶ್, ತಾಲ್ಲೂಕು ಸಂಯೋಜಕ ಮೋಹನ್, ಕೃಷ್ಣ, ಶಂಕರ್, ದರ್ಶನ್, ಮುರುಗೇಶ್, ಜೀನೇಶ್, ಅಶೋಕ್, ಲೋಕೇಶ್, ರಾಘು ಭಾಗವಹಿಸಿದ್ದರು.

# ವಿದ್ಯಾರ್ಥಿಗಳಲ್ಲಿ ಜ್ಞಾನದಾಹವಿದ್ದಾಗ ಸುಲಭವಾಗಿ ಗುರಿ ಮುಟ್ಟಬಹುದು

• ಪ್ರಜೋದಯ ವರದಿ




**ಅರಸೀಕೆರೆ:** ವಿದ್ಯಾರ್ಥಿಗಳಲ್ಲಿ ಜ್ಞಾನದ ದಾಹವಿದ್ದಾಗ ಮಾತ್ರ ಸುಲಭವಾಗಿ ತಮ್ಮ ಗುರಿ ಯನ್ನು ಮುಟ್ಟಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಹೆಚ್ಚು ಪುಸ್ತಕಗಳನ್ನು ಓದಬೇಕು, ಬರೆಯಬೇಕು. ಸಮಯ ಸದುಪಯೋಗ ಮಾಡಿಕೊಳ್ಳಬೇಕೆಂದು ಹೊಳೆನರಸೀಪುರ ತಾಲ್ಲೂಕು ದೊಡ್ಡಕಾಡನೂರು ಜೆಎಸ್‌ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಚೌಡಯ್ಯ ಕಟ್ನವಾಡಿ ಅವರು ತಿಳಿಸಿದರು.

ತಾಲ್ಲೂಕಿನ ಗಂಡಸಿಯ ಶ್ರೀ ಶಂಭುಲಿಂಗೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ 2026-27ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ, ಕ್ರೀಡೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪದವಿ ಪೂರ್ವ ಶಿಕ್ಷಣ ಅತ್ಯಂತ ಮಹತ್ವವಾದುದು. ಈ ಹಂತದಲ್ಲಿ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯದ ಬಗ್ಗೆ ದೊಡ್ಡ ದೊಡ್ಡ ಕನಸುಗಳನ್ನು ಕಾಣಬೇಕು. ಆಗ ಸಣ್ಣ ಪುಟ್ಟ ಕನಸುಗಳಾದರೂ ಈಡೇರು ತ್ತವೆಂದು ತಿಳಿಸಿದರು.

ಕೆಲವು ವಿದ್ಯಾರ್ಥಿಗಳ ಮನೆಯಲ್ಲಿ ಓದುವ ವಾತಾವರಣ ಇರುವುದಿಲ್ಲ. ಅಂತಹ ವಿದ್ಯಾರ್ಥಿ ಗಳು ಕಾಲೇಜಿನಲ್ಲಿಯೇ ಅಂದಿನ ಪಾಠಗಳನ್ನು ಅಂದಂದೇ ಓದಿ ಮನನ ಮಾಡಿಕೊಳ್ಳು ವುದನ್ನು ರೂಢಿಸಿಕೊಳ್ಳಬೇಕು. ಆಗ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿ ಭವಿಷ್ಯ ರೂಪಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಮೊಬೈಲ್‌ನ್ನು ಒಳ್ಳೆಯ ಉದ್ದೇಶಕ್ಕಿಂತ ಕೆಟ್ಟದ್ದಕ್ಕೆ ಹೆಚ್ಚು ಬಳಸುತ್ತಿದ್ದಾರೆ. ಸಹ ಪಾಠಿಗಳ ಜೊತೆಗೆ ತರಗತಿಯಲ್ಲಿ ಮಾಡಿದ ಪಾಠಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಗಳಿಗೆ ಉತ್ತರ ಕೇಳುವುದಕ್ಕೆ, ಉಪನ್ಯಾಸಕರೊಂದಿಗೆ ಅರ್ಥವಾಗದಿರುವ ಪ್ರಶ್ನೆಗಳನ್ನು ಕೇಳಿಸಿಕೊಳ್ಳುವುದಕ್ಕೂ ಉಪಯೋಗಿಸಬಹುದು. ಪಠ್ಯಕ್ಕೆ ಸಂಬಂಧಪಟ್ಟ ವಿಡಿಯೋಗಳನ್ನು ಮೊಬೈಲ್‌ಗಳಲ್ಲಿ ನೋಡಿ ಅರ್ಥಮಾಡಿಕೊಳ್ಳಬಹುದೆಂದರು.

ಪ್ರಾಂಶುಪಾಲ ಸಿ.ಚಂದ್ರಶೇಖರ್ ಅವರು ಮಾತನಾಡಿ, ಜ್ಞಾನದ ಹಸಿವನ್ನು ನೀಗಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಶ್ರಮಹಾಕಿ ವ್ಯಾಸಂಗ ಮಾಡುವ ಮೂಲಕ ಉತ್ತಮ ಫಲಿತಾಂಶ ಪಡೆದು ಕಾಲೇಜಿಗೆ ಮತ್ತು ಪೋಷಕರಿಗೆ ಕೀರ್ತಿ ತರಬೇಕು. ವಿದ್ಯಾರ್ಥಿಗಳು ತಮ್ಮ ಅವಗುಣಗಳನ್ನು ದೂರಮಾಡಬೇಕು. ಉತ್ತಮ ನಡೆನುಡಿ ಯನ್ನು ರೂಢಿಸಿಕೊಳ್ಳಬೇಕೆಂದರು.

ಸಂಸ್ಥೆಯ ನಿಕಟಪೂರ್ವ ಖಜಾಂಚಿ ಜಿ.ಎನ್.ದ್ಯಾವೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮಾಂತರ ಪ್ರದೇಶದಿಂದ ಬರುವ ವಿದ್ಯಾರ್ಥಿಗಳು ಪಟ್ಟಣಕ್ಕೆ ಬಂದು ಕೆಟ್ಟ ಹವ್ಯಾಸಗಳನ್ನು ಕಲಿತು ಭವಿಷ್ಯವನ್ನು ಹಾಳುಮಾಡಿಕೊಳ್ಳ ಬಾರದು. ಯುವ ಮನಸನ್ನು ಸ್ಥಿಮಿತದಲ್ಲಿಟ್ಟುಕೊಂಡು, ರೈತರ ಮಕ್ಕಳಾದರೂ ಉತ್ತಮ ಅಂಕಗಳನ್ನು ಗಳಿಸುವ ಮೂಲಕ ಉದ್ಯೋಗ ಪಡೆದು ಕಾಲೇಜಿಗೆ ಕೀರ್ತಿ ತರಬೇಕೆಂದು ಹರಸಿದರು.

ಸಮಾಜಶಾಸ್ತ್ರ ಉಪನ್ಯಾಸಕರಾದ ಹೆಚ್.ಗಂಗಾಧರ್, ಉಷಾ, ಡಿ.ಎಸ್. ಸೌಭಾಗ್ಯ, ಡಿ.ಎಸ್. ನಂಜೇಗೌಡ, ಸಿಬ್ಬಂದಿ ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಾರ್ವಜನಿಕರ ನಿದ್ದೆಗೆಡಿಸಿದ ಮನೆಗಳ್ಳತನ ಪ್ರಕರಣಗಳು

- ಜಿಲ್ಲೆಯ ವಿವಿಧೆಡೆ ದಿನವೂ ಕಳ್ಳರ ಕೈಚಳಕ
- ಪೊಲೀಸರಿಗೆ ಹೆಚ್ಚಿದ ತಲೆನೋವು



• ಪ್ರಜೋದಯ ವರದಿ

**ಹಾಸನ:** ಮೊದಲೆಲ್ಲಾ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಅಥವಾ ರಾತ್ರಿ ಹೊತ್ತು ಮನೆಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಕಿಡಿಗೇಡಿಗಳು ಇತ್ತೀಚೆಗೆ ತಮ್ಮ ವರಸೆ ಬದಲಿಸಿದ್ದು, ಹಾಡ ಹಗಲೇ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚುತ್ತಿರುವ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚುತ್ತಿವೆ.

ಆಲೂರು, ಬೇಲೂರು, ಹಾಸನ ವ್ಯಾಪ್ತಿಯಲ್ಲಿ ಕಳ್ಳತನ ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಪ್ರಕರಣ ಭೇದಿಸುವುದೇ ಪೊಲೀಸರಿಗೆ ತಲೆನೋವು ತರಿಸಿದ್ದು ಕಳ್ಳರ ಜಾಲ ಭೇದಿಸಲು ಇಲಾಖೆ ಪ್ರತ್ಯೇಕ ತಂಡ ರಚಿಸಿದೆ. ಆದರೆ, ಸಾರ್ವಜನಿಕರ ಆತಂಕ ಮಾತ್ರ ದ್ವಿಗುಣಗೊಳ್ಳುತ್ತಲೇ ಇದೆ. ಸಾರ್ವಜನಿಕರು ಮನೆಯಿಂದ ಹೊರ ಹೋಗಲು ಹೆದರುತ್ತಿದ್ದಾರೆ.

**ಚಿನ್ನಾಭರಣ ಕಳವು**

ಮನೆಯ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 40 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ನವಿಲೆ ಹೊಸೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮೂರ್ತಿ ಎಂಬುವವರು ಶನಿವಾರ ಮಧ್ಯಾಹ್ನ 12 ಗಂಟೆಗೆ ಬೀಗ ಹಾಕಿ ತೋಟಕ್ಕೆ ತೆರಳಿದ್ದರು. ಸಂಜೆ 4 ಗಂಟೆಗೆ ಮೂರ್ತಿ ಅವರ ಹೆಂಡತಿ ಲಕ್ಷ್ಮಮ್ಮ ಮನೆ ಹತ್ತಿರ ಬಂದಾಗ ಬಾಗಿಲ ಬೀಗ ಮುರಿದಿರುವುದು ತಿಳಿದಿದೆ. ಬೀರುವಿನ ಬೀಗ ಮುರಿದಿರುವ ಕಳ್ಳರು ಅಂದಾಜು 1.40 ಲಕ್ಷ ರೂ. ಬೆಲೆಯ 40 ತೂಕದ ಚಿನ್ನಾಭರಣ ಕಳವು ಮಾಡಿ ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಹೋಗಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಚೀಲಕ ಹಾಕಿಕೊಂಡು ಜಮೀನಿಗೆ ಹೋದ ಅರ್ಧ ಗಂಟೆಯೊಳಗೆ ಕಳ್ಳತನ ಮಾಡಿರುವ ಘಟನೆ ಹಾಸನ ತಾಲ್ಲೂಕಿನ ದೊಡ್ಡ ಹೊನ್ನೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಕೇಶವೇಗೌಡ ಅವರು ಮಧ್ಯಾಹ್ನ 12 ಗಂಟೆಗೆ ಮನೆ ಮುಂಭಾಗದ ಬಾಗಿಲಿಗೆ ಒಳಗಡೆಯಿಂದ ಬೋಲ್ಟ್ ಹಾಕಿ ಕೊಟ್ಟಿಗೆಯ ಬಾಗಿಲಿಗೆ ಹೊರಭಾಗದಿಂದ ಬೀಗ ಹಾಕಿಕೊಂಡು ಜಮೀನಿಗೆ ತೆರಳಿದ್ದರು. ವಾಪಾಸ್ ಬಂದ ಅರ್ಧ ಗಂಟೆಯಲ್ಲೇ ಒಳಪ್ರವೇಶಿಸಿದ್ದ ಕಳ್ಳರು ಬೀರುವಿನಲ್ಲಿಟ್ಟಿದ್ದ 441.5 ಗ್ರಾಂ ತೂಕದ ಅಂದಾಜು 56.16 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು 13.40 ಲಕ್ಷ ರೂ. ನಗದು ಕದ್ದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬೆಳ್ಳಿ ಆಭರಣ ಕಳವು**

ಸುದೀರ್ಘ 13 ದಿನಗಳವರೆಗೆ ಮನೆಗೆ ಬೀಗ ಹಾಕಿದ್ದನ್ನು ಗಮನಿಸಿದ ಕಳ್ಳರು ನಕಲಿ ಕೀ ನೆರವಿನಿಂದ ಬೀಗ ಮುರಿದು ಅಂದಾಜು 3.50 ಲ.ರೂ. ಬೆಲೆಯ ಬೆಳ್ಳಿ ಆಭರಣ ಕದ್ದಿರುವ ಘಟನೆ ಬೇಲೂರು ತಾಲ್ಲೂಕು ಕೆರೆಕೋಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕಲ್ಯಾಣಿ ಅವರು ಜು. 12ರಂದು ಕುಟುಂಬ ಸಮೇತ ಬೆಂಗಳೂರಿಗೆ ತೆರಳಿದ್ದರು. ಜು.25ರಂದು ವಾಪಾಸ್ ಬಂದಾಗ ಕಳ್ಳತನವಾಗಿರುವುದು ಗೊತ್ತಾಗಿದೆಯಾದರೂ ಮನೆ ಬಾಗಿಲು ಮುರಿಯದಿರುವುದು ಆಶ್ಚರ್ಯ ಮೂಡಿಸಿದೆ. ಬೀರುವಿನ 2 ಲಾಕರ್‌ಗಳನ್ನು ಯಾವುದೋ ಆಯುಧದಿಂದ ಮೀಟಿ ತೆಗೆದಿರುವ ಕಳ್ಳರು ಎರಡು ಬೆಳ್ಳಿಯ ಮುಖವಾಡ, ಒಂದು ಲೋಟ, ಕಾಮಾಕ್ಷಿ ದೀಪ, ಚೊಂಬು, ಬೆಳ್ಳಿ ತಟ್ಟೆ, ಸಣ್ಣ ಸಣ್ಣ ದೀಪ, ಎರಡು ಬೆಳ್ಳಿ ದೀಪ, ಮಗುವಿನ ಒಂದು ಜಿಲಿಕಿ, ಊಟದ ತಟ್ಟೆ, ಚಮಚ, ಒಂದು ಜೊತೆ ಕಾಲು ಚೈನು ಹಾಗು 10 ಸಾವಿರ ರೂ. ನಗದು ಕದ್ದಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿಜೃಂಭಣೆಯ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

**ಅರಸೀಕೆರೆ:** ಮಳೆಯ ಸಿಂಚನದ ಜತೆಗೆ ಮುಗಿಲು ಮುಟ್ಟಿದ ಗೋವಿಂದ ನಾಮ ಸ್ಮರಣೆಯೊಂದಿಗೆ ರಾಜ್ಯದ ತಿರುಪತಿ ಎಂದೇ ಪ್ರಸಿದ್ಧಿಯಾಗಿರುವ ತಾಲ್ಲೂಕಿನ ಮಾಲೇಕಲ್ ಅಮರಗಿರಿಯ ಶ್ರೀ ಲಕ್ಷ್ಮೀ ವೆಂಕಟ ರಮಣಸ್ವಾಮಿ ಮಹಾ ರಥೋತ್ಸವ ಭಾನುವಾರ ದೇವಾಲಯದ ಸಂಪ್ರದಾಯದಂತೆ ವಿಜೃಂಭಣೆಯಿಂದ ಜರುಗಿತು.



ಆಷಾಢ ಮಾಸದ ದ್ವಾದಶಿಯಂದು ವೆಂಕಟರಮಣ ಸ್ವಾಮಿಯ ರಥೋತ್ಸವ ನಡೆಯುವುದು ವಿಶೇಷವಾಗಿದ್ದು, ಜಾತ್ರಾ ಮಹೋತ್ಸವದ ಅಂಗವಾಗಿ ಮುಂಜಾನೆಯಿಂದಲೇ ತಂಡೋಪ ತಂಡವಾಗಿ ದೇವಾಲಯಕ್ಕೆ ಆಗಮಿಸಿದ ಸಹಸ್ರಾರು ಭಕ್ತರು, ಸರತಿ ಸಾಲಿನಲ್ಲಿ ನಿಂತು ಬೆಟ್ಟದ ತಪ್ಪಲಿನಲ್ಲಿರುವ ಲಕ್ಷ್ಮಿ ಸಮೇತ ಗೋವಿಂದರಾಜ ಸ್ವಾಮಿಗೆ ಪೂಜೆ ಸಲ್ಲಿಸಿ ದರ್ಶನ ಮಾಡಿದರು.

ಮತ್ತೆ ಕೆಲವು ಭಕ್ತರು, ಕಡಿದಾದ ಬೆಟ್ಟವನೇರಿ ಬೆಟ್ಟದ ಮೇಲೆ ನೆಲೆಸಿರುವ ಪದ್ಮಾವತಿ ಸಮೇತನಾದ ವೆಂಕಟರಮಣ ಸ್ವಾಮಿಯ ದರ್ಶನ ಮಾಡಿ ಪುನೀತರಾದರು. ಮಧ್ಯಾಹ್ನ ಶ್ರೀದೇವಿ-ಭೂದೇವಿ ಸಮೇತನಾದ ವೆಂಕಟ ರಮಣಸ್ವಾಮಿಯ ಉತ್ಸವ ಮೂರ್ತಿಯನ್ನು ಶೃಂಗಾರ ಮಾಡಿದ್ದ ರಥದ ಮೇಲೆ ಪ್ರತಿಷ್ಠಾಪಿಸಿ ಮಹಾ ಮಂಗಳಾರತಿ ಬೆಳಗುತ್ತಿದ್ದಂತೆಯೇ ಈ ಶುಭಘಳಿಗೆಗಾಗಿ ಕಾಯುತ್ತಿದ್ದ ಭಕ್ತರು, ಗೋವಿಂದ ನಾಮ ಸ್ಮರಣೆಯೊಂದಿಗೆ ರಥವನ್ನು ಎಳೆದು ಭಕ್ತಿ ಪರವಶರಾದರು.

ರಥೋತ್ಸವ ಸಂದರ್ಭದಲ್ಲಿ ರಾಜ್ಯ ಗೃಹಮಂಡಳಿ ಅಧ್ಯಕ್ಷರೂ ಆದ ಸ್ಥಳೀಯ ಶಾಸಕ ಕೆ.ಎಂ.ಶಿವಲಿಂಗೇಗೌಡ, ತಹಶೀಲ್ದಾರ್ ಸಂತೋಷ್ ಕುಮಾರ್, ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಸೇರಿ ವಿವಿಧ ಇಲಾಖೆ ಅಧಿಕಾರಿಗಳು, ನಾನಾ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ದೇವಾಲಯದ ಅಭಿವೃದ್ಧಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಶ್ರೀದೇವಿ-ಭೂದೇವಿ ಸಮೇತನಾದ ಲಕ್ಷ್ಮೀ ವೆಂಕಟರಮಣ ಸ್ವಾಮಿಯ ರಥೋತ್ಸವದಲ್ಲಿ ಪಾಲ್ಗೊಂಡು ಅಲಂಕೃತ ರಥದ ಮೇಲೆ ಬಾಳೆಹಣ್ಣು ಎಸೆದರೆ ಮನದ ಇಷ್ಟಾರ್ಥಗಳು ಈಡೇರಲಿವೆ ಎಂಬ ನಂಬಿಕೆ ಭಕ್ತರಲ್ಲಿ ಇರುವುದರಿಂದ ಹೆಚ್ಚಾಗಿ ನೂತನ ವಧು-ವರರು ರಥೋತ್ಸವ ವೇಳೆ ತೇರಿಗೆ ಬಾಳೆಹಣ್ಣು ಎಸೆದು ತಮ್ಮ ಪ್ರಾರ್ಥನೆಯನ್ನು ಸಲ್ಲಿಸುವುದು ಇಲ್ಲಿನ ರಥೋತ್ಸವದ ಮತ್ತೊಂದು ವಿಶೇಷ.

ರಥೋತ್ಸವದ ಅಂಗವಾಗಿ ಲಕ್ಷ್ಮೀ ಹಾಗೂ ಗೋವಿಂದರಾಸ್ವಾಮಿಗೆ ಹಾಗೂ ಬೆಟ್ಟದ ಮೇಲೆ ನೆಲೆಸಿರುವ ಪದ್ಮಾವತಿ ಸಮೇತನದ ವೆಂಕಟ ರಮಣ ಸ್ವಾಮಿಗೆ ಮಾಡಲಾಗಿದ್ದ ತೋಮಾಲೆ ಅಲಂಕಾರ ಭಕ್ತರ ಕಣ್ಮನ ಸೆಳೆಯುವಂತಿತ್ತು.

ಜಾತ್ರೋತ್ಸವ ಹಿನ್ನೆಲೆ ಬೆಟ್ಟದ ಮೇಲಿನ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯ ಹಾಗೂ ಹಾಗೂ ತಪ್ಪಲಿನಲ್ಲಿರುವ ಗೋವಿಂದರಾಜಸ್ವಾಮಿ ದೇವಾಲಯಗಳನ್ನು ಸುಣ್ಣ ಬಣ್ಣಗಳಿಂದ ಸಿಂಗಾರ ಮಾಡಲಾಗಿತ್ತು. ದೇವಾಲಯದ ಆವರಣದ ಉದ್ದಗಲಕ್ಕೂ ಕಟ್ಟಿರುವ ತಳಿರು ತೋರಣ ಭಕ್ತರನ್ನು ಸ್ವಾಗತಿಸಿದವು.

ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗಿಯಾಗಿದ್ದರಿಂದ ಯಾವುದೇ ಅಹಿತರಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆಯಿಂದ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಹಾಗೆಯೇ ನಗರದಿಂದ 4 ಕಿ.ಮೀ ದೂರದಲ್ಲಿರುವ ಮಾಲೇಕಲ್ ತಿರುಪತಿಗೆ ಭಕ್ತರು ಹೋಗಿ ಬರಲು ಅನುಕೂಲ ಆಗುವಂತೆ ರಾಜ್ಯ ಸಾರಿಗೆ ಸಂಸ್ಥೆಯಿಂದ ಹೆಚ್ಚುವರಿ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿತ್ತು. ಪ್ರತಿ ವರ್ಷದಂತೆ ಈ ವರ್ಷವೂ ದೇವಾಂಗ, ಈಡಿಗ ಹಾಗೂ ಬ್ರಾಹ್ಮಣ ಸಮಾಜದವರು ಭಕ್ತಾದಿಗಳಿಗೆ ಸಾಮೂಹಿಕ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಿದ್ದರು.

ರಥೋತ್ಸವದ ಸಂದರ್ಭದಲ್ಲಿ, ದೇವಾಲಯದ ಅಭಿವೃದ್ಧಿ ಸಮಿತಿಯ ನಾಗರಾಜು, ತಿರುಪತಿ ಚಂದ್ರು, ಎಸ್ ವಿಟಿ ಬಾಬು, ಪರೂಪಥೇದ್ದಾರ್ ಲೋಕೇಶಯ್ಯ ಸೇರಿ ಮತ್ತು ಇತರರು ಉಪಸ್ಥಿತರಿದ್ದರು.

## ಪರೀಕ್ಷಾ ವ್ಯವಸ್ಥೆ ಸುಧಾರಣೆಗೆ ಕಾರ್ಯಪಡೆ

» ಮೊದಲನೇ ಪುಟದಿಂದ

ಸಂಬಂಧಿಸಿದ ತನಿಖೆಯನ್ನು ಕೇವಲ ಎರಡು ತಿಂಗಳೊಳಗೆ (60 ದಿನಗಳು) ಪೂರ್ಣಗೊಳಿಸಬೇಕು ಎಂಬ ಕಟ್ಟು ನಿಟ್ಟಿನ ನಿಯಮ ರೂಪಿಸಲಾಗಿದೆ. ವಿಶೇಷ ತ್ವರಿತಗತಿ ನ್ಯಾಯಾಲಯಗಳು ಇಂತಹ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಎಲ್ಲಾ ರಾಜ್ಯ ಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು. ಆರೋಪ ಪಟ್ಟಿ ಸಲ್ಲಿಕೆಯಾದ ಮೂರು ತಿಂಗಳೊಳಗೆ ದಿನನಿತ್ಯದ ವಿಚಾರಣೆ ನಡೆಸಿ ತೀರ್ಪು ನೀಡಲು ಈ ನ್ಯಾಯಾಲಯಗಳು ಕಾರ್ಯನಿರ್ವಹಿಸಲಿವೆ.

2029ರ ಲೋಕಸಭಾ ಚುನಾವಣೆ ವೇಳೆಗೆ ಕ್ಷೇತ್ರ ಮರುವಿಂಗಡಣೆ ನಡೆಸಿ, ಮಹಿಳಾ ಮೀಸಲಾತಿ ಜಾರಿಗೊಳಿಸಲು ಅನುವಾಗುವಂತೆ ಸಾಂವಿಧಾನಿಕ ತಿದ್ದುಪಡಿ ಮಸೂದೆಗೆ ಈ ಅಧಿವೇಶನದಲ್ಲೇ ಅಂಗೀಕಾರ ಪಡೆಯಬೇಕು ಎಂಬುದು ಸರ್ಕಾರದ ಹಂಬಲ. ಅದಕ್ಕಾಗಿ, ವಿಪಕ್ಷಗಳ ಒಗ್ಗಟ್ಟನ್ನು ಮುರಿದು ಮೂರನೇ ಎರಡರಷ್ಟು ಬಹುಮತ ಪಡೆಯಲು ಅಗತ್ಯ ಸಿದ್ಧತೆಯನ್ನು ಸರ್ಕಾರ ಮಾಡಿಕೊಂಡಿದೆ. ಇನಷ್ಟು ಪ್ರಮುಖ ಮಸೂದೆಗಳನ್ನು ಮಂಡಿಸಲು ತಯಾರಿ ಮಾಂಡಿಕೊಂಡಿದೆ. ಆದರೆ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ಯುವಜನರು ಕೈಗೊಂಡ ಹೋರಾಟ ತೀವ್ರ ಸ್ವರೂಪ ಪಡೆದಿದ್ದರಿಂದ ಅದು ಮುಂದುವರಿದರೆ ಮಸೂದೆಗಳ ಅಂಗೀಕಾರಕ್ಕೆ ಹಿನ್ನಡೆಯಾಗುತ್ತದೆಂದು ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯಲಾಯಿತು ಎಂದು ವಿಶ್ಲೇಷಿಸಲಾಗುತ್ತಿದೆ.

## ನೋಟೀಸ್ ಪಡೆಯದ ಸಿ.ಟಿ.ರವಿ: ವಾಗ್ವಾದ

• ಪ್ರಜೋದಯ ವರದಿ

**ಚಿಕ್ಕಮಗಳೂರು:** ಮುಲ್ಲಾನಿಗೂ ನೀಟ್ ಪರೀಕ್ಷೆಗೂ ಏನು ಸಂಬಂಧವೆಂದು ಮಾತನಾಡಿದ್ದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು ನೀಡಲು ಬಂದಿದ್ದ ನೋಟೀಸ್ ಅನ್ನು ಪಡೆಯಲು ಅವರು ನಿರಾಕರಿಸಿದ್ದರಿಂದ ಮನೆಗೆ ಅಂಟಿಸಿ ವಾಪಾಸ್ಸಾದರು.



ಜಮಿಯಾ ಸಮಿತಿ ಅಧ್ಯಕ್ಷ ಮುದಾಸಿರ್ ಪಾಷ ನೀಡಿದ್ದ ದೂರು ಆಧರಿಸಿ ನಗರ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ. ಭಾನುವಾರ ಸಿ.ಟಿ.ರವಿ ಅವರ ಮನೆಗೆ ತೆರಳಿ ನೋಟೀಸ್ ನೀಡಲು ಪೊಲೀಸ್ ಅಧಿಕಾರಿಗಳು ಮುಂದಾದರು.

ನಾನು ಯಾವ ಧರ್ಮವನ್ನೂ ಅವಹೇಳನ ಮಾಡಿಲ್ಲ. ಮುಲ್ಲಾ ಎಂದರೆ ಮುಸ್ಲಿಂ ಎಂದು ಅರ್ಥವೇ, ದೆಹಲಿಯಲ್ಲಿ ಪ್ರತಿಭಟನೆ ವೇಳೆ ಬೆಂಕಿ ಹಾಕಲು ಬಂದಿದ್ದ ಮುಲ್ಲಾನ ಬಗ್ಗೆ ಮಾತನಾಡಿದ್ದೀನಿ. ಅವನ ಎದೆ ಸೀಳಿದರೆ ಮೂರಕ್ಷರ ಇಲ್ಲ ಎಂದು ಹೇಳಿದ್ದೀನಿ, ಈಗಲೂ ಹೇಳುತ್ತೇನೆ, ನಾಳೆಯೂ ಹೇಳುತ್ತೇನೆಂದು ಸಿ.ಟಿ.ರವಿ ಪೊಲೀಸ್ ಅಧಿಕಾರಿಗಳಿಗೆ ಹೇಳಿದರು.

ನನ್ನ ಭಾಷಣದಲ್ಲಿ ಮುಸ್ಲಿಂ ಸಮುದಾಯದ ಅವಹೇಳನ ಎಲ್ಲಿದೆ ತೋರಿಸಿ, ಯಾರೇ ದೂರು ಕೊಟ್ಟರೂ ಎಫ್‌ಐಆರ್ ದಾಖಲಿಸಿ ಬಂಧಿಸುತ್ತೀರಾ, ದೂರು ಕೊಟ್ಟವನಿಗೂ ಬೆಂಕಿ ಹಾಕಲು ಬಂದವನಿಗೂ ಏನು ಸಂಬಂಧವೆಂದು ಪ್ರಶ್ನಿಸಿದರು.

ನೋಟೀಸ್ ಪ್ರತಿಯನ್ನು ಪೊಲೀಸರು ಸಿ.ಟಿ.ರವಿ ಮನೆಯ ಗೇಟ್ ಪಕ್ಕದ ಗೋಡೆಗೆ ಅಂಟಿಸಿದರು. ಕಾರ್ಯಕರ್ತರು ತಕ್ಷಣವೇ ಅದನ್ನು ಹರಿದು ಬಿಸಾಡಿದರು. ಮನೆಯ ಮುಂದೆಯೇ ಕಾರ್ಯಕರ್ತರು ಧರಣಿ ಕುಳಿತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಭಾರೀ ಹೈಡ್ರಾಮಾ ನಡೆಯಿತು.

ಸೋಮವಾರವೇ ವಿಚಾರಣೆಗೆ ಹಾಜರಾಗಬೇಕು ಎಂದು ಪೊಲೀಸರು ಹೇಳುತ್ತಿದ್ದಾರೆ. ಪೂರ್ವ ನಿಗದಿ ಕಾರ್ಯಕ್ರಮ ಇರುವುದರಿಂದ ಬೇರೆ ದಿನಾಂಕ ಕೇಳುತ್ತಿದ್ದೇವೆ. ಆದರೆ, ಪೊಲೀಸರು ದಿನಾಂಕ ಬದಲಿಸುತ್ತಿಲ್ಲವೆಂದು ಸಿ.ಟಿ.ರವಿ ಪರ ವಕೀಲರು ಹೇಳಿದರು.

ಭಾರತದ ವಿರೋಧಿ ಶಕ್ತಿಗಳಿಂದ ಸಂಸತ್ ಭವನ ಮೇಲೆ ದಾಳಿ ನಡೆಸಲು ಯತ್ನಿಸಲಾಗಿದೆ ಎಂದು ಆರೋಪಿಸಿ ನಗರದ ಆಜಾದ್ ಪಾರ್ಕ್ ವೃತ್ತದಲ್ಲಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಗುರುವಾರ ಸಂಜೆ ನಡೆದ ಪ್ರತಿಭಟನೆಯಲ್ಲಿ ಸಿ.ಟಿ.ರವಿ ಭಾಷಣ ಮಾಡಿದ್ದರು.

# ಪಕ್ಷದ ಹಿತವೇ ಎಲ್ಲರಿಗೂ ಮುಖ್ಯ : ಗಾಯತ್ರಿ ಶಾಂತೇಗೌಡ

• ಪ್ರಜೋದಯ ವರದಿ

**ಅರಕಲಗೂಡು :** ಕಾಂಗ್ರೆಸ್ ಪಕ್ಷದ ಸಂಘಟನಾ ಬಲವರ್ಧನೆ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಸಂಬಂಧ ಅಭಿಪ್ರಾಯ ಸಂಗ್ರಹಿಸುವ ಸಲುವಾಗಿ ಆಯೋಜಿಸಿದ್ದ ಸಂಘಟನಾ ಸೃಜನ್ ಅಭಿಯಾನ ಸಭೆಯಲ್ಲಿ ಪಕ್ಷದೊಳಗಿನ ಬಣ ರಾಜಕೀಯದ ಚರ್ಚೆಯನ್ನು ಗಮನಿಸುತ್ತಿದ್ದು, ಅದನ್ನು ಸಹಿಸುವುದಿಲ್ಲವೆಂದು ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರು ಎಚ್ಚರಿಕೆ ನೀಡಿದರು.




ಭಾನುವಾರ ಪಟ್ಟಣದ ಚನ್ನಬಸವೇಶ್ವರ ಸಮುದಾಯ ಭವನದಲ್ಲಿ ಆಯೋಜನೆ ಮಾಡಲಾಗಿದ್ದ ಸಂಘಟನಾ ಸೃಜನ್ ಅಭಿಯಾನ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಸಭೆಯಲ್ಲಿ ಕೆಲ ಕಾರ್ಯಕರ್ತರು, ಬೆಂಬಲಿಗರು ಪ್ರತ್ಯೇಕವಾಗಿ ಗುಂಪುಗಳಲ್ಲಿ ಚರ್ಚೆಯಲ್ಲಿ ತೊಡಗಿರುವುದು ಪಕ್ಷದ ಸಂಘಟನೆಗೆ ಒಳಿತನ್ನು ಮಾಡುವಂತಹದಲ್ಲ. ಇಬ್ಬರ ಜಗಳ ಮೂರನೇಯವರಿಗೆ ಲಾಭವಾಗುವ ರೀತಿಯಲ್ಲಿ ಕಾರ್ಯಕರ್ತರು ನಡೆದುಕೊಳ್ಳಬಾರದು. ಕಾಂಗ್ರೆಸ್ ಪಕ್ಷದಲ್ಲಿ ಬಣಗಳಿಲ್ಲ, ಕಾಂಗ್ರೆಸ್ ಪಕ್ಷವೇ ಏಕೈಕ ಬಣ. ಪಕ್ಷದ ಹಿತವೇ ಎಲ್ಲರಿಗೂ ಮುಖ್ಯವಾಗಬೇಕೆಂದು ಅವರು ಖಡಕ್ ಎಚ್ಚರಿಕೆ ನೀಡಿದರು.

ಕಳೆದ ವಿಧಾನಸಭಾ ಚುನಾವಣೆಯ ಬಳಿಕ ಇದೇ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಲಾಗಿದ್ದ ಈ ಸಂಘಟನಾ ಸೃಜನ್ ಅಭಿಯಾನದಲ್ಲಿ ಶ್ರೀಧರ್ ಗೌಡ, ಕೃಷ್ಣೇಗೌಡ ಸೇರಿ ಹಲವು ಮುಖಂಡರು ಹಾಗೂ ಅವರ ಬೆಂಬಲಿಗರು ಮುಖಾಮುಖಿಯಾಗಿದ್ದರು. ಗಾಯತ್ರಿ ಶಾಂತೇಗೌಡ ಅವರ ಈ ಚಾಟಿ ಮಾತುಗಳು ಸಭೆಯಲ್ಲಿ ಗಮನ ಸೆಳೆದವು. ಅವರ ಮಾತುಗಳು ಶ್ರೀಧರ್ ಗೌಡ, ಕೃಷ್ಣೇಗೌಡ ಹಾಗೂ ಅವರ ಬೆಂಬಲಿಗರ ನಡುವೆ ಚರ್ಚೆಗೆ ಕಾರಣವಾದವೆಂದು ಹೇಳ ಬಹುದು.

ಇದೇ ವೇಳೆ ಸಂಸದೆ ಸುಧಾ ಅವರು ಪ್ರತ್ಯೇಕ ಕೊಠಡಿಯಲ್ಲಿ ಕುಳಿತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಸಂಬಂಧ ಪಕ್ಷದ ಪದಾಧಿಕಾರಿಗಳು,ಮುಖಂಡರು ಹಾಗೂ ಕಾರ್ಯಕರ್ತರಿಂದ ಅಭಿಪ್ರಾಯ ಸಂಗ್ರಹಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಹಿನ್ನೆಲೆಯಲ್ಲಿ ನಡೆದ ಈ ಸಭೆಯಲ್ಲಿ ಪಕ್ಷದೊಳಗಿನ ವಿವಿಧ ಅಭಿಪ್ರಾಯಗಳು, ಮುಖಂಡರ ಬೆಂಬಲಿಗರ ಚಟುವಟಿಕೆಗಳು ಹಾಗೂ ಸಂಘಟನಾ ವಿಚಾರಗಳು ಚರ್ಚೆಗೆ ಬಂದವು. ಸಭೆಯಲ್ಲಿ ಜಿಲ್ಲಾ ಅಧ್ಯಕ್ಷ ಲಕ್ಷ್ಮಣ್, ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

## ಅಧಿವೇಶನದಲ್ಲಿ ಸರ್ಕಾರದ ವೈಫಲ್ಯಗಳ ಚರ್ಚೆಗೆ ಸಿದ್ಧತೆ

**ಬೆಂಗಳೂರು:** ಬರ ನಿರ್ವಹಣೆಯಲ್ಲಿ ವೈಫಲ್ಯ, ಕೆಪಿಎಸ್‌ಸಿ ನೇಮಕಾತಿಯಲ್ಲಿ ಅಕ್ರಮ, ಪಡಿತರ ಅಕ್ಕಿ ಕಳ್ಳಸಾಗಣೆ, ಬೆಲೆ ಏರಿಕೆ ಕುರಿತು ವಿಧಾನ ಮಂಡಲದ ಅಧಿವೇಶನದಲ್ಲಿ ಸರ್ಕಾರವನ್ನು ಪ್ರಶ್ನಿಸಲು ಸಿದ್ದತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ಅಧಿವೇಶನ ಆರಂಭಕ್ಕೂ ಮುನ್ನ ಪಕ್ಷದ ಎಲ್ಲಾ ಶಾಸಕರು, ವಿಧಾನ ಪರಿಷತ್ ಸದಸ್ಯರ ಸಭೆ ಕರೆಯಲಿದ್ದೇವೆ. ಈ ಕುರಿತಾಗಿ ಜೆಡಿಎಸ್ ನಾಯಕರ ಜೊತೆಗೂ ಚರ್ಚಿಸಬೇಕಿದೆ. ಹೆಚ್.ಡಿ.ದೇವೇಗೌಡ ಅವರ ಪತ್ನಿ ಚನ್ನಮ್ಮ ಅವರ ನಿಧನದ ಕಾರಣಕ್ಕೆ, ಆ ಪಕ್ಷದ ನಾಯಕರ ಜೊತೆ ಮಾತುಕತೆ ನಡೆಸಲು ಆಗಿಲ್ಲ. ಅವರೊಂದಿಗೆ ಚರ್ಚಿಸಿದ ಬಳಿಕ, ನಮ್ಮ ಒತ್ತಾಯಗಳ ಬಗ್ಗೆ ಅಂತಿಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ ಎಂದರು.

## ಬರ ಪರಿಹಾರಕ್ಕೆ ಒತ್ತಾಯಿಸಲು ದೆಹಲಿಯಲ್ಲಿ ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ಬರದ ಸ್ಥಿತಿಯಲ್ಲಿ ಅಗತ್ಯ ನೆರವು ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ದೆಹಲಿಯಲ್ಲಿ ಸಭೆ ಸೇರುತ್ತಿದ್ದೇವೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಇಲ್ಲಿನ ರಾಷ್ಟ್ರೀಯ ಸೈನಿಕ ಸ್ಮಾರಕದ ಬಳಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ರಾಜ್ಯದಲ್ಲಿನ ಬರದ ಪರಿಸ್ಥಿತಿ, ಬಾಕಿ ಇರುವ ವಿವಿಧ ಯೋಜನೆಗಳು ಹಾಗೂ ಸಮಸ್ಯೆಗಳ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದು, ಧ್ವನಿ ಎತ್ತುವ ಬಗ್ಗೆ ಚರ್ಚಿಸಲು ಸೋಮವಾರ ಸಂಜೆ ದೆಹಲಿಯಲ್ಲಿ ರಾಜ್ಯದ ಎಲ್ಲಾ ಸಂಸದರ ಸಭೆ ಕರೆಯಲಾಗಿದೆ ಎಂದರು.

ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರೂ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಬರ ಪರಿಸ್ಥಿತಿ ಯಲ್ಲಿ ಎಲ್ಲರೂ ಒಂದಾಗಿ ಕೆಲಸ ಮಾಡಬೇಕು. ಈ ಸಂಕಷ್ಟ ಸಮಯದಲ್ಲಿ ಕೇಂದ್ರ ಸರ್ಕಾರ ನೆರವು ನೀಡುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆಗಸ್ಟ್ 13ರಿಂದ ವಿಧಾನಸಭೆಯ ಮುಂಗಾರು ಅಧಿವೇಶನ ಕರೆಯಲು ತೀರ್ಮಾನಿಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ನೀರವ್ ಗಡಿಪಾರು ವಿಳಂಬ: ಪ್ರೀತಿ ಪಟೇಲ್ ಅಸಮಾಧಾನ

**ಲಂಡನ್:** ನ್ಯಾಯಾಲಯದಲ್ಲಿ ಪ್ರಾಥಮಿಕ ಪ್ರಕರಣ ದೃಢಪಟ್ಟ ನಂತರ, ನೀರವ್ ಮೋದಿ ಅವರನ್ನು ಭಾರತಕ್ಕೆ ಗಡಿಪಾರು ಮಾಡಲು 2021ರಲ್ಲೇ ಗೃಹ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ಸಹಿ ಹಾಕಿದ್ದೆ. ಆದರೂ ಕೂಡ ಈಗಲೂ ಬ್ರಿಟನ್‌ನಲ್ಲಿದ್ದಾರೆ ಎಂಬುದು ಆತಂಕ ಹಾಗೂ ದಿಗಿಲು ಮೂಡಿಸಿದೆ ಎಂದು ಬ್ರಿಟನ್‌ನ ಮಾಜಿ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ತಿಳಿಸಿದ್ದಾರೆ. ನಮ್ಮ ವ್ಯವಸ್ಥೆಯು ವಿವೇಚನೆಯಿಂದ ಕೂಡಿದ್ದರೆ, ಆರೋಪಿಯನ್ನು ಇಲ್ಲಿಯೇ ಬಂಧಿಸಿಡುತ್ತಿರಲಿಲ್ಲ. ಇಷ್ಟೊತ್ತಿಗೆ ಆರೋಪಿಯು (ನೀರವ್) ದೇಶದಲ್ಲಿ ಇರುತ್ತಿರಲಿಲ್ಲ ಎಂದು ಸಂದರ್ಶನದಲ್ಲಿ ತಿಳಿಸಿದ್ದಾರೆ.

# ಜಿಂಬಾಬ್ವೆ ವಿರುದ್ಧ ಭಾರತ ಕ್ಲೀನ್‌ಸ್ವೀಪ್ ಸಾಧನೆ

### ಸೂರ್ಯವಂಶಿ ಭರ್ಜರಿ ಅರ್ಧ ಶತಕ | ಮಯಾಂಕ್ ಯಾದವ್‌ಗೆ 3 ವಿಕೆಟ್

• ಪ್ರಜೋದಯ ವರದಿ

**ಹರಾರೆ:** ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಅರ್ಧಶತಕದ ನೆರವಿನಿಂದ ಭಾರತ ತಂಡವು ಜಿಂಬಾಬ್ವೆ ವಿರುದ್ಧದ ಮೂರನೇ ಟಿ-20 ಪಂದ್ಯದಲ್ಲಿ 35 ರನ್‌ಗಳ ಗೆಲುವು ಸಾಧಿಸಿದೆ. ಈ ಮೂಲಕ ಮೂರು ಪಂದ್ಯಗಳ ಸರಣಿಯನ್ನು ಗೆದ್ದಿದೆ.




ಅಂತಿಮ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಭಾರತ ತಂಡವು 20 ರನ್ ಗಳಿಸಿದ್ದ ವೇಳೆ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ (2ರನ್) ವಿಕೆಟ್ ಕಳೆದುಕೊಂಡಿತು. ಆರಂಭದಲ್ಲಿ ಎಂದಿಗಿಂತ ಸ್ವಲ್ಪ ನಿಧಾನಗತಿಯ ಆಟ ಆಡಿದ ವೈಭವ್ ಸೂರ್ಯ ವಂಶಿ, 49 ಎಸೆತಗಳಲ್ಲಿ 8 ಬೌಂಡರಿ ಮತ್ತು 4 ಸಿಕ್ಸರ್‌ಗಳ ನೆರವಿನಿಂದ 81 ರನ್ ಗಳಿಸಿದರು.

ಇಶಾನ್ ಕಿಶನ್ (29 ರನ್), ಶ್ರೇಯಸ್ ಅಯ್ಯರ್ (27 ರನ್) ಉಪಯುಕ್ತ ಆಟವಾಡಿದರು. ಡೆತ್ ಓವರ್‌ನಲ್ಲಿ ರಿಂಕು ಸಿಂಗ್ ಅವರು 14 ಎಸೆತಗಳಲ್ಲಿ 25 ರನ್‌ಗಳಿಸುವ ಮೂಲಕ ತಂಡದ ಮೊತ್ತವನ್ನು 190ರ ಗಡಿ ದಾಟಿಸಿದರು. ತಿಲಕ್ ವರ್ಮಾ ಅಜೇಯ 11 ರನ್ ಗಳಿಸಿದರು. ಭಾರತ ತಂಡವು 20 ಓವರ್‌ಗಳ ಅಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತು.

ಜಿಂಬಾಬ್ವೆ ಪರ ಬ್ರಾಡ್ ಇವಾನ್ಸ್ 2, ಸಿಕಂದರ್ ರಝಾ, ವೆಸ್ಲಿ ಮಾಧೆವೆರೆ ಮತ್ತು ಬ್ಲೆಸಿಂಗ್ ಮುಝರಬಾನಿ ತಲಾ 1 ವಿಕೆಟ್ ಪಡೆದರು.

193 ರನ್‌ಗಳ ಗುರಿ ಬೆನ್ನಟ್ಟಿದ ಜಿಂಬಾಬ್ವೆ ತಂಡದ ಆರಂಭಿಕ ಆಟಗಾರರು ವೈಫಲ್ಯ ಅನುಭವಿಸಿದರು. ಮಧ್ಯಮ ಕ್ರಮಾಂಕದ ಆಟಗಾರ ರಯಾನ್ ಬರ್ಲ್(ಅಜೇಯ 54 ರನ್, 43ಎಸೆತ) ಅರ್ಧಶತಕ ಸಿಡಿಸಿದರು ಕೂಡ ತಂಡವನ್ನು ಗೆಲುವಿನ ದಡ ಸೇರಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಜಿಂಬಾಬ್ವೆ ತಂಡವು 20 ಓವರ್‌ಗಳ ಅಂತ್ಯಕ್ಕೆ 7 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ಈ ಮೂಲಕ ಭಾರತ ತಂಡವು 35 ರನ್‌ಗಳ ಗೆಲುವಿನೊಂದಿಗೆ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಿತು.

ಈ ಪಂದ್ಯದಲ್ಲಿ ಭಾರತ ಪರ ಮಯಾಂಕ್ ಯಾದವ್ 3, ಯಶ್ ಠಾಕೂರ್ 2 ವಿಕೆಟ್ ಕಬಳಿಸಿದರು.

## 200, 500 ಮುಖಬೆಲೆಯ ಭಾರತದ ನೋಟುಗಳ ಬಳಕೆಗೆ ನೇಪಾಳ ಸಮ್ಮತಿ

**ಕಠ್ಮಂಡು:** ಭಾರತ ಮತ್ತು ನೇಪಾಳದ ಪ್ರಜೆಗಳು 2016 ನವೆಂಬರ್ 9ರ ಬಳಿಕ ಚಲಾವಣೆಗೆ ಬಂದಿರುವ 200 ಮತ್ತು 500 ಮುಖಬೆಲೆಯ 25000ವರೆಗಿನ ನಗದನ್ನು ನೇಪಾಳಕ್ಕೆ ತರಲು ಅಥವಾ ಅಲ್ಲಿಂದ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ.

ಈ ಮೂಲಕ 2016ರಲ್ಲಿ ಭಾರತದಲ್ಲಿ ನೋಟು ರದ್ದುಗೊಂಡ ಬಳಿಕ ನೇಪಾಳದಲ್ಲಿ ಭಾರತದ 100 ಮುಖಬೆಲೆಗಿಂತ ಹೆಚ್ಚಿನ ಮುಖಬೆಲೆಯ ನೋಟುಗಳಿಗೆ ವಿಧಿಸಲಾಗಿದ್ದ ನಿರ್ಬಂಧವನ್ನು ತೆಗೆದುಹಾಕಲಾಗಿದೆ.

ಈ ಬಗ್ಗೆ ಪ್ರಕಟಣೆ ಬಿಡುಗಡೆ ಮಾಡಿರುವ ನೇಪಾಳ ರಾಷ್ಟ್ರ ಬ್ಯಾಂಕ್ (ಎನ್‌ಆರ್‌ಬಿ), 2016 ನವೆಂಬರ್ 9ರ ಮುನ್ನ ಚಲಾವಣೆಗೆ ಬಂದಿರುವ ಭಾರತದ 500 ಮತ್ತು 1000 ಸಾವಿರ ಮುಖಬೆಲೆಯ ನೋಟುಗಳಿಗೆ ನೇಪಾಳದಲ್ಲಿ ವಿಧಿಸಿರುವ ನಿರ್ಬಂಧವು ಮುಂದುವರಿಯಲಿದೆ ಎಂದು ತಿಳಿಸಿದೆ.

ಈ ಬಗ್ಗೆ ಫೆಬ್ರುವರಿ 11ರಂದೇ ನೇಪಾಳವು ಗೆಜೆಟ್ ಅಧಿಸೂಚನೆ ಹೊರಡಿಸಿತ್ತು. ಇದೀಗ ಹೊಸ ನಿಯಮ ಮತ್ತು ಅನುಷ್ಠಾನದ ಕುರಿತ ಸ್ಪಷ್ಟನೆಯೊಂದಿಗೆ ಹೊಸ ಪ್ರಕಟಣೆ ನೀಡಲಾಗಿದೆ.

ಭಾರತದಿಂದ ಹೊರತುಪಡಿಸಿ ಬೇರೆ ಯಾವುದೇ ದೇಶದಿಂದ ನೇಪಾಳದ ಪ್ರಜೆಗಳು ಭಾರತದ ನೋಟುಗಳನ್ನು ನೇಪಾಳಕ್ಕೆ ತರುವಂತಿಲ್ಲ. ಅದೇ ರೀತಿ ನೇಪಾಳದಿಂದ ಭಾರತ ನೋಟುಗಳನ್ನು ಬೇರೆ ದೇಶಕ್ಕೆ ಕೊಂಡೊಯ್ಯುವಂತಿಲ್ಲ ಎಂದು ಎನ್‌ಆರ್‌ಬಿ ವಕ್ತಾರ ಗುರು ಪ್ರಸಾದ್ ಪೌದೇಲ್ ತಿಳಿಸಿದ್ದಾರೆ.

ಹೊಸ ನಿಯಮದಿಂದ ಭಾರತದಿಂದ ಬರುವ ಪ್ರವಾಸಿಗರಿಗೆ ಹಾಗೂ ಭಾರತದಲ್ಲಿ ವ್ಯಾಪಾರ ಮತ್ತು ಉದ್ಯಮ ನಡೆಸುತ್ತಿರುವ ನೇಪಾಳದ ಪ್ರಜೆಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

## ಫ್ರಾನ್ಸ್‌ನಲ್ಲಿ ಕಾಳ್ಗಿಚ್ಚು : 55 ಸಾವಿರ ಜನರ ಸ್ಥಳಾಂತರ

• ಪ್ರಜೋದಯ ವರದಿ

**ಲೆಗೆ-ಕ್ಯಾಪ್-ಫೆರ್ರೆಟ್(ಫ್ರಾನ್ಸ್):** ಫ್ರಾನ್ಸ್‌ನ ನೈರುತ್ಯ ಭಾಗದಲ್ಲಿ ಕಾಳ್ಗಿಚ್ಚು ವ್ಯಾಪಕವಾಗಿದ್ದು, ಭಾನುವಾರ 55 ಸಾವಿರ ಜನರು ತಮ್ಮ ಮನೆಗಳನ್ನು ತೊರೆದರು. ಆ ಪ್ರದೇಶದಲ್ಲಿ ಈವರೆಗೆ 2.2 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ. 42 ಸಾವಿರ ಹೆಕ್ಟೇರ್ ಪ್ರದೇಶ ಅಗ್ನಿಗೆ ಆಹುತಿಯಾಗಿದೆ.

ಬಿರುಗಾಳಿ ಮತ್ತು ಪ್ರತಿಕೂಲ ಪರಿಸ್ಥಿತಿಗಳಿಂದಾಗಿ ಬೆಂಕಿ ವ್ಯಾಪಿಸುತ್ತಿರುವುದನ್ನು ನಿಯಂತ್ರಿ ಸಲು ಕಷ್ಟಕರವಾಗುತ್ತಿರುವುದರಿಂದ ಜನರನ್ನು ಸ್ಥಳಾಂತರಿಸಲಾಗುತ್ತಿದೆಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ನೆರೆಯ ದೇಶವಾದ ಸ್ಪೇನ್‌ನಲ್ಲಿಯೂ ಕಾಳ್ಗಿಚ್ಚು ಪರಿಣಾಮ ಭೀಕರವಾಗಿದ್ದು, ಶನಿವಾರ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ 1.16 ಲಕ್ಷ ಮಂದಿ ಸ್ಥಳಾಂತರಗೊಂಡಿದ್ದಾರೆ.

## ಆಪರೇಷನ್ ಬ್ಲ್ಯಾಕ್ ಥಂಡರ್-1 ನೇತೃತ್ವ ವಹಿಸಿದ್ದ ಎನ್‌ಎಸ್‌ಜಿ ಮೊದಲ ಮುಖ್ಯಸ್ಥ ನಿಧನ

• ಪ್ರಜೋದಯ ವರದಿ

**ನವದೆಹಲಿ:** ಪಂಜಾಬ್‌ನ ಅಮೃತಸರದ ಪ್ರಸಿದ್ಧ ಸ್ವರ್ಣ ಮಂದಿರದಲ್ಲಿ 1986ರಲ್ಲಿ ಶಸ್ತ್ರಸಜ್ಜಿತ ಉಗ್ರರನ್ನು ಮಟ್ಟ ಹಾಕಲು ನಡೆದಿದ್ದ ಆಪರೇ ಷನ್ ಬ್ಲ್ಯಾಕ್ ಥಂಡರ್-1 ಕಾರ್ಯಾಚರಣೆಯ ವೇಳೆ ನೇತೃತ್ವ ವಹಿಸಿದ್ದ ರಾಷ್ಟ್ರೀಯ ಭದ್ರತಾ ದಳದ (ಎನ್‌ಎಸ್‌ಜಿ) ಮೊದಲ ಮಹಾ ನಿರ್ದೇಶಕ (ಡಿ.ಜಿ) ಆರ್.ಟಿ. ನಾಗರಾಣಿ ಅವರು ಭಾನುವಾರ ನಿಧನರಾದರು.



ಅವರಿಗೆ 98 ವರ್ಷ ವಯಸ್ಸಾಗಿತ್ತು. ಕಳೆದ ಕೆಲವು ದಿನಗಳಿಂದ ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ದಕ್ಷಿಣ ದೆಹಲಿಯಲ್ಲಿರುವ ತಮ್ಮ ನಿವಾಸದಲ್ಲಿ ನಾಗರಾಣಿ ಕೊನೆಯುಸಿರೆಳೆದರೆಂದು ಅಧಿಕಾರಿಗಳು ತಿಳಿಸಿದ್ದಾರೆ. ನಾಗರಾಣಿ ಅವರ ಅಂತ್ಯಕ್ರಿಯೆ ಮಂಗಳವಾರ ನೆರವೇರಲಿದೆ.

ಆಂಧ್ರಪ್ರದೇಶ ಕೆಡರ್‌ನ 1951ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದ ನಾಗರಾಣಿ ಅವರು, 1984ರ ಆಗಸ್ಟ್ 17ರಿಂದ 1986ರ ಸೆಪ್ಟೆಂಬರ್ 25ರವರೆಗೆ ಬ್ಲ್ಯಾಕ್ ಕ್ಯಾಟ್ಸ್ ಕಮಾಂಡೋ ಪಡೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಭಯೋತ್ಪಾದನಾ ನಿಗ್ರಹ, ವಿಮಾನ ಅಪಹರಣ ತಡೆ ಮತ್ತು ಒತ್ತೆಯಾಳುಗಳ ರಕ್ಷಣೆಗಾಗಿ 1984ರಲ್ಲಿ ಎನ್‌ಎಸ್‌ಜಿ ಸ್ಥಾಪನೆಯಾಗಿತ್ತು.

ಅಧಿಕೃತ ದಾಖಲೆಗಳ ಪ್ರಕಾರ, 1986ರ ಏಪ್ರಿಲ್ 30ರ ರಾತ್ರಿ ಸ್ವರ್ಣ ಮಂದಿರದ ಸಂಕೀರ್ಣ ದಲ್ಲಿ ಆಪರೇಷನ್ ಬ್ಲ್ಯಾಕ್ ಥಂಡರ್-1 ಆರಂಭಗೊಂಡು, ಮರುದಿನ ಬೆಳಗಿನ ಜಾವದವರೆಗೆ ನಡೆಯಿತು. ಸ್ವರ್ಣಮಂದಿರದ ಪಾವಿತ್ರ್ಯತೆಗೆ ಯಾವುದೇ ಧಕ್ಕೆಯಾಗದಂತೆ, ಸಿಬ್ಬಂದಿ ಬರಿಗಾಲಿ ನಲ್ಲಿ ಹಾಗೂ ತಲೆಮುಚ್ಚಿಕೊಂಡು ಕಾರ್ಯಾಚರಣೆ ನಡೆಸಿದ್ದರು. ಯಾವುದೇ ಸಾರ್ವಜನಿಕ ಆಸ್ತಿಗೆ ಹಾನಿಯಾಗದಂತೆ 122 ಶಂಕಿತರನ್ನು ವಶಕ್ಕೆ ಪಡೆಯಲಾಗಿತ್ತು.

**ಪಾಕಿಸ್ತಾನಕ್ಕೆ ಸಚಿವ ರಾಜನಾಥ್ ಸಿಂಗ್ ಪರೋಕ್ಷ ಎಚ್ಚರಿಕೆ | ಕಾರ್ಗಿಲ್ ವಿಜಯ್ ದಿವಸ್**

# ದುಸ್ಸಾಹಸಕ್ಕೆ ಮುಂದಾದರೆ ಕಲ್ಪನೆಗೂ ಮೀರಿದ ಪ್ರತಿಕ್ರಿಯೆ

• ಪ್ರಜೋದಯ ವರದಿ

**ನವದೆಹಲಿ:** ನೆರೆಯ ರಾಷ್ಟ್ರ ಯಾವುದೇ ದುಸ್ಸಾಹಸಕ್ಕೆ ಕೈ ಹಾಕಿದರೂ ಅವರ ಕಲ್ಪನೆಗೂ ಮೀರಿದ ಪ್ರತಿಕ್ರಿಯೆ ನೀಡಬೇಕಾಗುತ್ತದೆಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪಾಕಿಸ್ತಾನಕ್ಕೆ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ.

ಕಾರ್ಗಿಲ್ ವಿಜಯ್ ದಿವಸ್ ಹಿನ್ನಲೆಯಲ್ಲಿ ಲಡಾಖ್‌ನ ದ್ರಾಸ್‌ನಲ್ಲಿ ಏರ್ಪಡಿಸಿದ್ದ ಹುತಾತ್ಮ ಯೋಧರ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಕ್ರಮಿಸಿ ಕೊಂಡಿರುವ ಭಾರತದ ಒಂದು ಭಾಗವಾದ ಪಿಒಕೆ ಹೊರತುಪಡಿಸಿ ಪಾಕಿಸ್ತಾನದೊಂದಿಗೆ ಯಾವುದೇ ಮಾತುಕತೆ ಇರುವುದಿಲ್ಲ. ಭಾರತವು ದತ್ತಾಂಶ ಕೇಂದ್ರಗಳನ್ನು ನಿರ್ಮಿಸುತ್ತಿದೆ ಆದರೆ ಪಾಕಿಸ್ತಾನವು ಆಮೂಲಾಗ್ರ ಕೇಂದ್ರಗಳನ್ನು ರಚಿಸುತ್ತಿದೆ ಎಂದು ಸಚಿವರು ಹೇಳಿದರು.

ಇದು ಎರಡು ದೇಶಗಳ ನಡುವಿನ ವ್ಯತ್ಯಾಸವನ್ನು ತೋರಿಸುತ್ತದೆ. ಭಯೋತ್ಪಾದನೆ ಯನ್ನು ಬೆಂಬಲಿಸುವ ಅಥವಾ ತೊಡಗಿಸಿಕೊಳ್ಳುವವರಿಗೆ ಆಪರೇಷನ್ ಸಿಂದೂರ್ ಕಾರ್ಯಾಚರಣೆಯ ಪರಿಣಾಮಗಳು ಏನೆಂದು ತೋರಿಸಿದೆ. ಭಾರತದ ಸಶಸ್ತ್ರ ಪಡೆಗಳು ಯಾವಾಗಲೂ ದೇಶವನ್ನು ರಕ್ಷಿಸುವ ಸಾಮರ್ಥ್ಯ ಹೊಂದಿವೆ, ಆದರೆ ಹಿಂದೆ ಕೊರತೆ ಯಿರುವುದು ರಾಜಕೀಯ ಇಚ್ಛಾಶಕ್ತಿ ಎಂದು ರಾಜನಾಥ್ ಸಿಂಗ್ ಹೇಳಿದರು.

ನಮ್ಮ ಸಶಸ್ತ್ರ ಪಡೆಗಳಿಗೆ ಹಿಂದೆ ಸಾಮರ್ಥ್ಯದ ಕೊರತೆ ಇರಲಿಲ್ಲ ಎಂದಲ್ಲ. ಆಗಲೂ ಅವರು ಶಕ್ತಿಶಾಲಿಯಾಗಿದ್ದರು. ಕೊರತೆಯಿದ್ದ ಏಕೈಕ ವಿಷಯವೆಂದರೆ ರಾಜಕೀಯ ಇಚ್ಛಾಶಕ್ತಿ. ಈ ವೇದಿಕೆಯಿಂದ, ಕೇಂದ್ರ ಸರ್ಕಾರದಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಯಿಲ್ಲ ಅಥವಾ ಭವಿಷ್ಯದಲ್ಲಿಯೂ ಇರುವುದಿಲ್ಲ ಎಂದು ನಾನು ನಿಮಗೆ ಭರವಸೆ ನೀಡಲು ಬಯಸುತ್ತೇನೆ. ನೀವು ನಮ್ಮ ಗಡಿಗಳನ್ನು ಕಾಪಾಡುತ್ತಿರುವಾಗ ಮತ್ತು ರಾಷ್ಟ್ರವನ್ನು ರಕ್ಷಿಸುತ್ತಿರುವಾಗ, ಭಾರತದ ಮೇಲೆ ಕೆಟ್ಟ ಕಣ್ಣು ಹಾಕುವ ಧೈರ್ಯ ಯಾರಿಗೂ ಇರುವುದಿಲ್ಲ ಎಂದು ನಮಗೆ ತಿಳಿದಿದೆ ಎಂದು ಸಿಂಗ್ ಸೈನಿಕರನ್ನು ಉದ್ದೇಶಿಸಿ ಹೇಳಿದರು.

ದೆಹಲಿಯಲ್ಲಿರುವವರು ಸಶಸ್ತ್ರ ಪಡೆಗಳಿಗೆ ಆದ್ಯತೆ ನೀಡದ ಕಾಲ ಕಳೆದುಹೋಗಿದೆ. ಇಂದು, ದೆಹಲಿಯಲ್ಲಿ ಭಾರತದ ಭದ್ರತೆಯ ಹಿತದೃಷ್ಟಿಯಿಂದ ನಿರ್ಣಾಯಕ ಕ್ರಮ ಕೈಗೊಳ್ಳಲು ಸಶಸ್ತ್ರ ಪಡೆಗಳಿಗೆ ಸ್ವಾತಂತ್ರ್ಯ ನೀಡುವ ಸರ್ಕಾರವಿದೆ ಎಂದು ಹೇಳಿದರು.

ಕಾರ್ಗಿಲ್ ಯುದ್ಧದ ಉತ್ಸಾಹವನ್ನು ಉಲ್ಲೇಖಿಸಿದ ರಾಜನಾಥ್ ಸಿಂಗ್ ಅವರು, ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರ ಯೇ ದಿಲ್ ಮಾಂಗೆ ಮೋರ್ ಎಂಬ ಘೋಷಣೆಯನ್ನು ನೆನಪಿಸಿಕೊಂಡರು. ಇದು ಭಾರತೀಯ ಸೈನಿಕರ ದೃಢನಿಶ್ಚಯ ಮತ್ತು ಧೈರ್ಯವನ್ನು ಪ್ರತಿಬಿಂಬಿಸುತ್ತದೆಂದು ಹೇಳಿದರು.

**ಭಾರತೀಯ ಸೇನೆ ಸನ್ನದ್ಧ**

ಕಳೆದ 1999ರ ಕಾರ್ಗಿಲ್ ಸಂಘರ್ಷದ ನಂತರ ಒಳನುಸುಳುವವರ ಉದ್ದೇಶ ಬದಲಾಗಿಲ್ಲ ಮತ್ತು ಭಾರತೀಯ ಸೇನೆಯು ಯಾವುದೇ ಸವಾಲಿಗೆ ಸಂಪೂರ್ಣವಾಗಿ ಸಿದ್ಧವಾಗಿದೆ. ಸರ್ಕಾರವು ಸಶಸ್ತ್ರ ಪಡೆಗಳ ಆಧುನೀಕರಣಕ್ಕೆ ವಿಶೇಷ ಒತ್ತು ನೀಡಿದೆ ಮತ್ತು ಮಿಲಿಟರಿಗೆ ಇತ್ತೀಚಿನ ಉಪಕರಣಗಳು ಮತ್ತು ಅತ್ಯುತ್ತಮ ತರಬೇತಿಯನ್ನು ಪಡೆಯುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಇಂದಿಗೂ ಸವಾಲುಗಳು ಕಡಿಮೆಯಾಗಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು. ಕಳೆದ ಕೆಲವು ವರ್ಷಗಳಲ್ಲಿ ಸೈನ್ಯದ ಅನೇಕ ಸಂಪ್ರದಾಯಗಳನ್ನು ಹತ್ತಿರ ದಿಂದ ನೋಡುವ ಅವಕಾಶ ನನಗೆ ಸಿಕ್ಕಿದೆ. ಇದು ಒಬ್ಬ ಜವಾನ ಮತ್ತು ಅಧಿಕಾರಿ ಒಟ್ಟಿಗೆ ಕುಳಿತು ಒಂದೇ ಊಟ ಮಾಡುವ ಏಕೈಕ ಸಂದರ್ಭವಾಗಿದೆ. ಅತ್ಯುತ್ತಮ ತಂಡದ ಕೆಲಸದ ಪ್ರಜ್ಞೆಯನ್ನು ಚಿತ್ರಿಸುತ್ತದೆಂದು ಅವರು ಹೇಳಿದರು.

ಸಮಾಜದಲ್ಲಿ ಕಂಡುಬರುವ ಮಿತಿಗಳನ್ನು ಮೀರಿ ಮೇಲೇರುವ ನಿಮ್ಮ ಸಾಮರ್ಥ್ಯವು ನಿಜವಾದ ಶಕ್ತಿ. ಈ ಶಕ್ತಿ ಮಾತ್ರ ಕಾರ್ಗಿಲ್‌ನಂತಹ ಯುದ್ಧಗಳನ್ನು ಗೆಲ್ಲಲು ನಮಗೆ ಅನುವು ಮಾಡಿಕೊಡುತ್ತದೆಂದು ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019